# ಜನಪದ ಸಂಸ್ಕೃತಿ

ಡಾ. ಹಿ. ಶಿ. ರಾಮಚಂದ್ರೇಗೌಡ



ಜನಪ್ರಿಯ ಜಾನಪದ ಪುಸ್ತಕ ಮಾಲೆ-೪೧

# ಜನಪದ ಸಂಸ್ಕೃತಿ

ಡಾ. ಹಿ. ಶಿ. ರಾಮಚಂದ್ರೇಗೌಡ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

**JANAPADA SAMSKRITHI - Folk culture** - By **Dr. Hi. Shi . Ramachandre Gowda.** Pulished by **Karnataka Janapada Parishath.** No. 1, Jaladarshini Layout, Near M. S. Ramaiah Hospital Gate, New BEL Road,
Bangalore-560 054,
Phone : 080-23605033. Janapada Loka : 7201143

ಪ್ರಥಮ ಮುದ್ರಣ : ೨೦೦೯ ಪುಟಗಳು : ೩೨

ಪ್ರತಿಗಳು : ೨೦೦೦

ಬೆಲೆ : **ರೂ.** ೧೦ (ಹತ್ತು ರೂಪಾಯಿ)

ಹಕ್ಕುಗಳು : ಲೇಖಕರಿಗೆ ಸೇರಿವೆ

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ನಾಡೋಜ ಡಾ॥ ಜಿ. ನಾರಾಯಣ** | ಅಧ್ಯಕ್ಷರು |
| **ಶ್ರೀ ಟಿ. ತಿಮ್ಮೇಗೌಡ** | ಸದಸ್ಯರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ॥ ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ॥ ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಕಾರ್ಯದರ್ಶಿ–ಸಂಚಾಲಕರು |

ಮುದ್ರಕರು :
**ಚಂದನ ಪ್ರಿಂಟರ್ಸ್**
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು–೫೬೦ ೦೫೦

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ– ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಖ್ಯಾತ ಲೇಖಕರಾದ **ಡಾ. ಹಿ. ಶಿ. ರಾಮಚಂದ್ರೇಗೌಡ** ಅವರು **ಜನಪದ ಸಂಸ್ಕೃತಿ** ಕುರಿತು ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಜಿ. ನಾರಾಯಣ**
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

೩೦-೧೧-೨೦೦೯
ಬೆಂಗಳೂರು

# ಜನಪದ ಸಂಸ್ಕೃತಿ

'ಜನ' ಎಂದರೆ ಕೆಲ ಅಥವ ಹಲವು ವ್ಯಕ್ತಿಗಳು ಒಂದೆಡೆ ಸೇರಿಕೊಂಡ ಗುಂಪು. ಈ 'ಜನ' ಏನೂ ಉದ್ದೇಶವಿಲ್ಲದೆ ಒಂದು ಕಡೆ ಸೇರಿಕೊಂಡಿದ್ದರೆ ಅವರಿಗೆ ಯಾವ ಬೆಲೆಯೂ ಇಲ್ಲ. ಕಾರಣವಿಲ್ಲದೆ ಜನ ಒಂದು ಕಡೆ ಗುಂಪು ಸೇರುವುದಿಲ್ಲ. ಹೀಗೆ ಗುಂಪು ಸೇರಲು ಎರಡು ಕಾರಣಗಳಿರುತ್ತವೆ. ಒಂದು ತಾತ್ಕಾಲಿಕ ಮತ್ತೊಂದು ಸಾರ್ವಕಾಲಿಕ ಉದ್ದೇಶವಾಗಿರುತ್ತದೆ. ರಾಜಕಾರಣಿಗಳು ಪ್ರಚಾರ ಸಭೆ ನಡೆಸಿದಾಗ, ಜಾತ್ರೆ, ಉತ್ಸವ ನಡೆದಾಗ, ಮದುವೆ ಕಾರ್ಯದಲ್ಲಿ ಹೀಗೆ ಸೇರುವ ಜನರ ಗುಂಪುಗಳು ತಾತ್ಕಾಲಿಕವಾದುವು. ಇವರಿಗೆ ಒಂದೆಂಬ ಸಮಾನ ಉದ್ದೇಶ ಇದ್ದರೂ ಅದು ತಾತ್ಕಾಲಿಕವಾದ ಉದ್ದೇಶ. ಮದುವೆಗೆ ಬಂದವರು ಆಶೀರ್ವಾದ ಮಾಡಿ, ಊಟ ಮುಗಿಸಿಕೊಂಡು ಹೋಗುವುದನ್ನು ಬಿಟ್ಟರೆ ಹೆಣ್ಣು-ಗಂಡಿನ ಮುಂದಿನ ಬಾಳುವೆಯಲ್ಲಿ ಅವರದೇನೂ ಪಾತ್ರವಿರುವುದಿಲ್ಲ. ಉಳಿದ ತಾತ್ಕಾಲಿಕ ಗುಂಪುಗಳದೂ ಇದೆ ರೀತಿಯ ಕೆಲಸ.

ಇನ್ನು ಕೆಲವು ಗುಂಪುಗಳಿರುತ್ತವೆ. ಅವು ಸಾರ್ವಕಾಲಿಕ ಉದ್ದೇಶವನ್ನು ಇಟ್ಟುಕೊಂಡು ಒಂದುಗೂಡಿರುತ್ತವೆ. ಒಂದೆ ಪ್ರದೇಶದಲ್ಲಿ ವಾಸವಿರುತ್ತವೆ, ಬಹಳ ಕಾಲದಿಂದ ಒಂದಾಗಿ ಬದುಕುತ್ತಿರುತ್ತವೆ. ಇವುಗಳನ್ನು ಗುಂಪು ಎಂದು ಕರೆಯುವುದಿಲ್ಲ, ಸಮೂಹಗಳು ಎನ್ನುತ್ತೇವೆ. ಈ ಸಮೂಹಗಳು ತಮ್ಮದೇ ಆದ ಸಂಸ್ಕೃತಿಯನ್ನು ಬಹಳ ಕಾಲದಿಂದ ಬದುಕುತ್ತಾ ಬಂದು ಒಂದು ಪರಂಪರೆಯನ್ನು ಹೊಂದಿರುತ್ತವೆ. ಇಂಥವನ್ನು ಸಮಾಜ ಎಂದೂ ಕರೆಯುತ್ತಾರೆ. ಈ ಸಮುದಾಯಗಳು

ಸ್ವರೂಪದಲ್ಲಿ ಪುರಾತನ ಸ್ವಭಾವದವೂ ಆಗಿರಬಹುದು, ಆನಂತರದ ಕಾಲದಲ್ಲಿ ಸಂಘಟಿತವಾಗಿರುವವುಗಳೂ ಆಗಿರಬಹುದು. ಇವೆಲ್ಲ ಈಗ ನಮ್ಮ ನಡುವೆ ಬಾಳಿ ಬದುಕುತ್ತಿವೆ. ಇಂಥ ಒಂದು ಸಂಸ್ಕೃತಿ ಮತ್ತು ಅದರ ಇತಿಹಾಸವಾದ ಪರಂಪರೆಯನ್ನು ಉಳಿಸಿಕೊಂಡು ಬದುಕುತ್ತಿರುವ ಸಮೂಹಗಳನ್ನೇ ನಾವು ಜನಪದಗಳೆಂದು ಕರೆಯುತ್ತೇವೆ.

ಇದರ ಅರ್ಥ ಜನಪದವೆಂಬುದು ಒಂದು ಕ್ರಿಯಾಶೀಲ ಸಮಾಜ. ಒಂದು ಜನಪದ ಎಂದರೆ ಅದು ಬುಡಕಟ್ಟು ಸಮಾಜ, ವೃತ್ತಿ ಸಮಾಜ, ಜಾತಿ ಸಮಾಜ, ಧರ್ಮ ಸಮಾಜ ಅಥವಾ ವರ್ಗ ಸಮಾಜ ಆಗಿದ್ದಿರಬಹುದು. ಬುಡಕಟ್ಟು ಜನರು ತಮ್ಮ ಪೂರ್ವಜರ ನಡವಳಿಕೆಗಳನ್ನೆ ಉಳಿಸಿಕೊಂಡು ಬದುಕುತ್ತಿರುತ್ತಾರೆ. ಆದರೆ ಅವರು ಇದೇ ಇಪ್ಪತ್ತೊಂದನೆಯ ಶತಮಾನದಲ್ಲೇ ಎಲ್ಲರೊಡನೆ ತಮ್ಮದೆ ಕ್ರಿಯಾಶೀಲತೆಯೊಂದಿಗೆ ಬದುಕುತ್ತಿದ್ದಾರೆ. ಒಕ್ಕಲಿಗರು ವೃತ್ತಿ ಸಮಾಜಕ್ಕೆ ಸೇರಿದವರು. ಒಕ್ಕುವವನು ಎಂದರೆ ತೆನೆಯಿಂದ ದವಸ–ಧಾನ್ಯಗಳನ್ನು ಬೇರೆ ಮಾಡುವವನು ಅಥವ ಅಚ್ಚುಕಟ್ಟು ಮಾಡುವವನು ಎಂದು ಅಥವ ಬೆಳೆ ಬೆಳೆದು, ಬೆಳೆಕೊಯ್ದು, ಬಡಿದು, ತೂರಿ, ಕೇರಿ ಅಚ್ಚುಕಟ್ಟು ಮಾಡಿ ತನಗೂ ಇಟ್ಟುಕೊಂಡು, ಬೇರೆಯವರಿಗೂ ವಿತರಿಸುವ ಕಸುಬನ್ನು ನಿರಂತರವಾಗಿ ಮಾಡುತ್ತಾ ಬಂದುದರಿಂದ ಅವನಿಗೆ ಈ ಹೆಸರು ಬಂದಿದೆ. ಇವರದು ಜಾತಿಯಲ್ಲ ವೃತ್ತಿ.

ಜಾತಿ ಎಂಬುದು ತನ್ನ ಸ್ವಹಿತಕ್ಕಾಗಿ ಇತರರನ್ನು ದುಡಿಸಿಕೊಂಡು, ದೂರ ಇಟ್ಟು ತಾನು ಸುಖವಾಗಿ ಬದುಕಬೇಕೆಂಬ ತತ್ವವನ್ನು ರೂಢಿಸಿಕೊಂಡ ಸ್ವಾರ್ಥಿಗಳ ಸಮಾಜ. ಜಾತಿ ಸಮಾಜ ಇರುವುದು ಭಾರತದಲ್ಲಿ ಮಾತ್ರ. ಬ್ರಾಹ್ಮಣ; ವೈಶ್ಯ ಎಂಬುವು ಮಾತ್ರ ಜಾತಿಗಳು. ಕ್ಷತ್ರಿಯ ಎಂಬುವವರು ಭಾರತದಲ್ಲಿ ನಿರ್ದಿಷ್ಟವಾದ ಜಾತಿಗೆ ಸೇರಿದವರಲ್ಲ. ಯಾರು ತೋಳ್ಬಲದಿಂದ ರಾಜ್ಯವನ್ನು ಸ್ಥಾಪಿಸಿ ಆಳ್ವಿಕೆ ನಡೆಸುತ್ತಾರೋ

ಅವರೆಲ್ಲ ಕ್ಷತ್ರಿಯರ ಹೆಸರಿನಲ್ಲಿ ಕರೆಸಿಕೊಳ್ಳುತ್ತಿದ್ದರು. ಭಾರತದ ಕ್ಷತ್ರಿಯರ ಇತಿಹಾಸವನ್ನು ಅಧ್ಯಯನ ಮಾಡಿದರೆ ಈ ಸತ್ಯ ತಿಳಿಯುತ್ತದೆ. ಧರ್ಮ ಸಮಾಜಗಳೆಂದರೆ ಕ್ರೈಸ್ತ, ಮುಸ್ಲಿಂ, ಪಾರ್ಸಿ, ಬೌದ್ಧ, ವೈದಿಕ–ಎಂಬ ಏಕವ್ಯಕ್ತಿ ಧರ್ಮ ಸಂಸ್ಥಾಪಕನಿಂದ ಸೃಷ್ಟಿಯಾದ, ಧರ್ಮಶಾಸ್ತ್ರಗಳ ಆಧಾರದ ಮೇಲೆ ಬದುಕುತ್ತಿರುವ ಸಮಾಜಗಳು. ವರ್ಗ ಸಮಾಜಗಳೆಂದರೆ ದುಡಿಮೆ ಮತ್ತು ಸಂಪತ್ತಿನ ವ್ಯತ್ಯಾಸದ ಮೇಲೆ ನಿರ್ಣಯಗೊಂಡ ಸಮಾಜಗಳು. ಭಾರತದಲ್ಲಿಯ ನಿಜವಾದ ವರ್ಗ ಸಮಾಜಗಳೆಂದರೆ ದಲಿತರು ಮತ್ತು ಇತರ ದುಡಿಮೆಯ ಮೇಲೆ ವರ್ಗೀಕರಣಗೊಂಡ ಶ್ರಮಜೀವಿಗಳ ಸಮಾಜಗಳು. ಆಧುನಿಕ ತಂತ್ರಜ್ಞಾನದ ಪ್ರಭಾವದಿಂದ ಪ್ರತಿಯೊಂದು ಪೂರ್ವದ ಸಮಾಜ–ಜಾತಿಗಳಲ್ಲೂ ವರ್ಗಗಳು ಉಂಟಾಗಿವೆ. ಪೂರ್ವಾಶ್ರಮ ದೃಷ್ಟಿಯಿಂದ ಬ್ರಾಹ್ಮಣರನ್ನು ಜಾತಿ ಸಮಾಜ(ಜನಪದ) ಎಂದು ಕರೆದರೆ, ಒಟ್ಟು ಭಾರತದ ಅಭಿವೃದ್ಧಿ ನೆಲೆಯಿಂದ ನೋಡಿದರೆ ಅದು ಭಾರತದ ಮೇಲುವರ್ಗ ಎನಿಸಿಕೊಳ್ಳುತ್ತದೆ. ಹಿಂದೆ ಅದು ಜಾತಿಯಿಂದ ಸಂಪದ್ಭರಿತವಾಗಿತ್ತು. ಈಗ ಅದು ಆಧುನಿಕ ಮೇಲು ವರ್ಗವಾಗಿ ಸಂಪದ್ಭರಿತವಾಗಿದೆ. ಆಧುನಿಕ ಶಿಕ್ಷಣ ಮತ್ತು ತಂತ್ರಜ್ಞಾನದಲ್ಲಿ ಪ್ರಗತಿಯನ್ನು ಸಾಧಿಸಿದ ಕಾರಣದಿಂದ ಅದಕ್ಕೆ ಈ ಅನುಕೂಲ ಸಾಧ್ಯವಾಗಿದೆ. ಈ ಹೊತ್ತಿನ ಪ್ರತಿಯೊಂದು ಜಾತಿ ಮತ್ತು ವೃತ್ತಿ ಗುಂಪುಗಳೂ ಎರಡು ವರ್ಗಗಳಲ್ಲಿ ವಿಭಜನೆಗೊಂಡಿವೆ. ಹೀಗೆ ಜನರನ್ನು ವರ್ಗಗಳಲ್ಲಿ ವಿಂಗಡಿಸುವುದೆ ಆಧುನಿಕ ಅಭಿವೃದ್ಧಿಯ ಉದ್ದೇಶವಾಗಿದೆ.

ಈ ಎಲ್ಲಾ ಬಗೆಯ ಸಮಾಜ ಅಥವ ಜನಪದಗಳು ಈ ಹೊತ್ತು ನಮ್ಮ ನಡುವೆ ಅಸ್ತಿತ್ವದಲ್ಲಿವೆ ಮತ್ತು ಕ್ರಿಯಾಶೀಲವಾಗಿವೆ. ಸಾಂಸ್ಕೃತಿಕ ದೃಷ್ಟಿಯಿಂದ ತಮ್ಮ ಹಿಂದಿನ ಸಂಸ್ಕೃತಿಯಲ್ಲಿ ಬೇಡವಾದುದನ್ನು ಅತ್ತ ಉಳಿಸಿ, ಬೇಕಾದ ಸಂಸ್ಕೃತಿ ಭಾಗವನ್ನು ಇವು ಕ್ರಿಯಾಶೀಲವಾಗಿ

ಇಟ್ಟುಕೊಂಡಿವೆ. ಅದೇ ಸಂದರ್ಭದಲ್ಲಿ ಆಧುನಿಕ ತಂತ್ರಜ್ಞಾನದ ಸೌಲಭ್ಯಗಳನ್ನೂ ಅಳವಡಿಸಿಕೊಂಡು ನಾಗರೀಕವಾಗಿವೆ. ಆದ್ದರಿಂದ ಈ ಹೊತ್ತಿನ ಪ್ರತಿಯೊಂದು ಜನಪದ (ಸಮಾಜ)ವೂ ಏಕಕಾಲದಲ್ಲಿ ತಮ್ಮ ಪರಂಪರಾಗತ ಸಂಸ್ಕೃತಿಯೊಂದಿಗೆ ಆಧುನಿಕ ನಾಗರೀಕ ಸೌಲಭ್ಯಗಳನ್ನು ಕ್ರಿಯಾಶೀಲವಾಗಿ ಅನುಭವಿಸುತ್ತಿರುವ ಸಮೂಹಗಳಾಗಿವೆ.

ಈ ಹಿನ್ನಲೆಯಿಂದ ನೋಡಿದಾಗ ಪುರಾತನ, ಹಿಂದುಳಿದ, ಅನಾಗರಿಕ ಎಂದು ಕರೆಯಬಹುದಾದ ಯಾವ ಜನಪದವೂ ನಮ್ಮ ಮಧ್ಯೆ ಉಳಿದಿಲ್ಲ. ಮಾನವ ಶಾಸ್ತ್ರಜ್ಞರು ಆಧುನಿಕ ಸಮಾಜದಿಂದ ದೂರ ಉಳಿದವರೆಂದು ಹೇಳುವ ಬುಡಕಟ್ಟುಗಳು ಕೂಡ ಇಪ್ಪತ್ತೊಂದನೆಯ ಶತಮಾನದ ಎಲ್ಲ ಜನರ ಜೊತೆಗೇ ಬದುಕುತ್ತಿದ್ದಾರೆ. ಅವರಿಗೆ ಕಡಿಮೆ ಆಧುನಿಕ ಸೌಲಭ್ಯಗಳಿವೆ ಎಂಬ ಕಾರಣಕ್ಕೆ ಅವರನ್ನು ಹಿಂದುಳಿದವರು ಎಂದು ಕರೆಯಬಹುದಷ್ಟೆ. ಸಂಸ್ಕೃತಿಯ ದೃಷ್ಟಿಯಿಂದ ಅವರು ಹಿಂದುಳಿದವರು ಎಂದು ಹೇಳುವುದು ತಪ್ಪು. ಅಮೆರಿಕದಲ್ಲಿ ಅಮಿಶ್ ಎಂಬ ಜನವರ್ಗವೊಂದು ಇದೆ. ಅವರು ಈ ಹೊತ್ತೂ ವಿಮಾನಕ್ಕಿಂತ ಕುದುರೆ ಸವಾರಿಯೆ ಹೆಚ್ಚು ಖುಷಿ ಅನ್ನುತ್ತಾರೆ ಹಾಗು ಬದುಕುತ್ತಿದ್ದಾರೆ. ಸೌಲಭ್ಯಗಳ ತಾರತಮ್ಯ ದೃಷ್ಟಿಯಿಂದ ಹಿಂದುಳಿದಿರುವಿಕೆ – ಮುಂದುವರಿದಿರುವಿಕೆಯನ್ನು ನಿರ್ಣಯಿಸುವುದು ತಪ್ಪು ನಿರ್ಧಾರ. ಇದು ಸಾರ್ವಕಾಲಿಕ ಅಭಿವೃದ್ಧಿ ನಿರ್ಣಯದ ಮಾನದಂಡ ಅಲ್ಲ. ಅಮೆರಿಕದಲ್ಲಿ ಶ್ರೀಮಂತಿಕೆ ಮೆರೆಸುತ್ತಿರುವ ರಿಪಬ್ಲಿಕನ್ ಮನೋಧರ್ಮದವರು ಮೂಲತಃ ಮಹಾವರ್ಣಭೇದ ಮನೋಧರ್ಮದವರು. ಭಾರತದ ಮೇಲು ಜಾತಿ, ಮೇಲು ವರ್ಗವಾದ ಬ್ರಾಹ್ಮಣದಲ್ಲಿ ಹೆಚ್ಚಿನವರು ಮೂಲಭೂತವಾದಿಗಳು. ಸರಳಾರ್ಥದಲ್ಲಿ ನೋಡುವುದಾದರೆ ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಇವರು ಮೂಲಭೂತವಾದಿಗಳು, ಸೌಲಭ್ಯ ಸಂಗ್ರಹ ದೃಷ್ಟಿಯಿಂದ ಅತ್ಯಂತ ಆಧುನಿಕರು. ಆದ್ದರಿಂದ ಹಿಂದುಳಿದಿರುವಿಕೆ –

ಮುಂದುವರಿದಿರುವಿಕೆಯನ್ನು ಸರಳ ಸಂಸ್ಕೃತಿ ಮೂಲತತ್ವ ಅಥವ ಸೌಲಭ್ಯ ಸಂಪಾದನೆಯ ದೃಷ್ಟಿಯಿಂದ ನೋಡಲಾಗದು. ಒಂದು ಜನಪದ ಸಮಕಾಲೀನವಾಗಿ ಹೇಗೆ ಕ್ರಿಯಾಶೀಲವಾಗಿದೆ ಎಂಬುದಷ್ಟೆ ಅದನ್ನು ಅಳೆಯುವ ಮಾನದಂಡವಾಗಿದೆ.

ಈ ದೃಷ್ಟಿಯಲ್ಲಿ 'ಹಿಂದುಳಿದ' ಅಥವ 'ಮುಂದುವರಿದ' ಎಂಬ ಪ್ರತ್ಯೇಕ ಪ್ರತ್ಯೇಕ ಜನಪದಗಳು ಇಲ್ಲ. ತನ್ನ ಸೃಜನಶೀಲತೆಗಾಗಿ ಜನಪದವೊಂದು ಈಗ ಹೇಗೆ ಕ್ರಿಯಾಶೀಲವಾಗಿದೆ ಎಂಬುದಷ್ಟೆ ಆ ಜನಪದವನ್ನು ನೋಡುವುದಕ್ಕೆ, ಗ್ರಹಿಸುವುದಕ್ಕೆ ಮತ್ತು ಅಧ್ಯಯನ ಮಾಡುವುದಕ್ಕೆ ಇರುವ ಮಾನದಂಡವಾಗಿದೆ.

ಹೀಗೆ ಜನಪದವೊಂದನ್ನು ಕ್ರಿಯಾಶೀಲ ಚಟುವಟಿಕೆಯ ಸಮೂಹ ಎಂದು ನೋಡುವುದು ಅದರ ಜಡತ್ವದ ನಿರಾಕರಣೆ. ಈ ಜಡತತ್ವ ಮತ್ತು ಜಡವಾದದಿಂದಲೆ ಜನಪದ ಎಂದರೆ ಹಿಂದುಳಿದ, ಪುರಾತನ, ನಾಗರೀಕದೂರ ಎಂದು ತಿಳಿದು ನಿರ್ವಚಿಸಲಾಯಿತು. ಒಂದು ಕಡೆಯಿಂದ ಭಾರತದ ಪ್ರಾಕೃತ ಮನಸ್ಸುಗಳು ಪುರಾತನತ್ವವೆಂಬುದು ಶ್ರೇಷ್ಠವೆಂಬ ಕಾರಣಕ್ಕೆ ಈ ಜಡವಾದವನ್ನು ಒಪ್ಪಿಕೊಂಡವು. ಮತ್ತೊಂದು ಕಡೆಯಿಂದ ಯೂರೋ ಅಭಿವೃದ್ಧಿ ಪ್ರಭುಗಳು ಭಾರತದೇಶವೆ; ಸಂಪತ್ತು ಮತ್ತು ಜನ ಅನಭಿವೃದ್ಧಿ ಹೊಂದಿವೆ ಎಂಬ ತತ್ವವನ್ನು ಹೇರಿದಾಗ, ಭೌತಿಕ ವಸ್ತುಗಳ ಆಕರ್ಷಣೆಗೆ ಬಿದ್ದ ನಮ್ಮ ಕೊರತೆ ವಾದಿಗಳು – ಅದನ್ನು ಅನಾಮತ್ತು ಸ್ವೀಕರಿಸಿದರು. ಆ ಮೂಲಕ ತಾವು ತಮ್ಮ ಸಮಾಜ ಕ್ರಿಯಾಶೀಲವಾಗಿಲ್ಲ ಎಂದು ಒಪ್ಪಿಕೊಂಡುಬಿಟ್ಟರು. ಪೂರ್ವಾತ್ಯ ಮತ್ತು ಪಾಶ್ಚಿಮಾತ್ಯ – ಈ ಎರಡೂ ಕಡೆಯ ಜಡವಾದಿಗಳಿಂದಾಗಿ ನಮ್ಮ ಜನಪದಗಳನ್ನು ನಾವೇ ನಿಷ್ಕ್ರಿಯಗೊಳಿಸುವ ಸಂಚಿನಲ್ಲಿ ಭಾಗಿಯಾದೆವು. ಈ ಇಪ್ಪತ್ತೊಂದನೆ ಶತಮಾನದ ರಾಜಕೀಯ ಸ್ವರೂಪವನ್ನು ನಿರ್ಧರಿಸುತ್ತಿರುವವರು ಈ ಸಾಮಾನ್ಯರೆಂಬ ಜನಪದರೆ ಆಗಿದ್ದಾರೆ

ಎಂಬುದನ್ನು ಮರೆತುಬಿಟ್ಟೆವಲ್ಲ!

ಹೀಗೆ ನಮ್ಮ ಜನಪದಗಳು ನಮ್ಮ ಕ್ರಿಯಾಶೀಲತೆ ಎಂದು ತಿಳಿದಂತೆ ನಮ್ಮ ಸಂಸ್ಕೃತಿಯೂ ನಮ್ಮ ಕ್ರಿಯಾಶೀಲತೆ ಎಂದು ತಿಳಿಯಬೇಕು. ನಾನು ಸಂಸ್ಕೃತಿಯನ್ನು ಕ್ರಿಯೆಯಲ್ಲಿ ನೋಡುವವನು. ಸಂಸ್ಕೃತಿ ಮೊತ್ತದಲ್ಲಿ ಇಲ್ಲ. ಅಂಥ ಸಂಸ್ಕೃತಿ ಸಗಟು (Stock) ಸಂಸ್ಕೃತಿ. ಅದು ಒಡೆಯನ, ಯಜಮಾನನ, ಉದ್ಯಮ ಪತಿಯ ಸಂಸ್ಕೃತಿ. ಆ ಸಗಟು ಎಂಬುದು ಚಲನಗೆ ಕಾರಣವಾಗಬಹುದು; ಅದನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದಾಗ. ಹಾಗೆ ಮಾರುಕಟ್ಟೆಗೆ ಬಿಡುಗಡೆ ಮಾಡದಿದ್ದರೆ ಅದು ಅನುತ್ಪಾದಕ. ಸಂಸ್ಕೃತಿಯ ಸಂಗತಿಯೂ ಇದೆ ನಿಯಮಕ್ಕೆ ಒಳಪಟ್ಟಿದೆ. ಸಂಸ್ಕೃತಿ ಜನರ ಮಧ್ಯೆ ಇದ್ದರೆ ಅದು ಜನರ ಕ್ರಿಯೆ–ಪ್ರಕ್ರಿಯೆ. ಅದನ್ನು ಒಂದು ಕಡೆ ಕೂಡಿಟ್ಟರೆ ಅದು ಯಜಮಾನನ ಸಂಸ್ಕೃತಿ, ಅವನ ಕ್ರಿಯೆ, ಅವನ ನಡೆ. ಬಹುತೇಕ ಧರ್ಮ, ಜಾತಿ ಮತ್ತು ಮಾಲೀಕರ ಸಂಸ್ಕೃತಿಗಳು ಮೊತ್ತ ಅಥವಾ ಸಗಟು ಸಂಸ್ಕೃತಿಗಳು. ಜನಪದ ಸಂಸ್ಕೃತಿ ಜನರ ಸಂಸ್ಕೃತಿ. ದಿನನಿತ್ಯದಲ್ಲಿ ಅವರು ಬದುಕುವ ಸಂಸ್ಕೃತಿಯೆ ಜನಪದ ಸಂಸ್ಕೃತಿ. ಸಂಸ್ಕೃತಿ ಎಂದರೆ ನಡವಳಿಕೆ ಎಂದಷ್ಟೆ ತಿಳಿಯಬೇಕು. ಒಬ್ಬ ವ್ಯಕ್ತಿ ಅಥವ ಒಂದು ಜನಪದ ತನ್ನ ಅಸ್ತಿತ್ವಕ್ಕಾಗಿ ಇತರ ವ್ಯಕ್ತಿ ಅಥವ ಸಮಾಜದೊಡನೆ ಹೇಗೆ ವರ್ತಿಸುತ್ತಾನೆ ಮತ್ತು ನಿರ್ಣಯಿಸಿಕೊಳ್ಳುತ್ತಾನೆ ಎಂಬುದೇ ಆಗಿದೆ. ಇಂಥ ಕ್ರಿಯಾಶೀಲ ಕ್ರಿಯೆಯ ಹೊರಗೆ ಹೇಳುವ ಯಾವುದೇ ಬಗೆಯ ಸಿದ್ಧ, ಶಿಷ್ಟ ಮತ್ತು ಶ್ರೇಷ್ಠವೆನ್ನುವ ಸಂಸ್ಕೃತಿಗಳು ಜೀವ–ಜೀವನರಹಿತವಾದುವು.

**ಜನಪದ ಸಂಸ್ಕೃತಿಯನ್ನು ಎರಡುಸ್ತರದಲ್ಲಿ ತಿಳಿಯಬೇಕು.**

1) ಜನಸಾಮಾನ್ಯರಲ್ಲಿ ಸಾಮಾನ್ಯವಾಗಿರುವ ಸಾಮಾನ್ಯತಾ ಸಂಸ್ಕೃತಿ.

2) ಧರ್ಮ, ಜಾತಿ, ವರ್ಗ ಮತ್ತು ಶಿಷ್ಟವೆಂದು ಕರೆಯುವ ಸಿದ್ಧ

ಸಂಸ್ಕೃತಿ, ಜನರಲ್ಲಿ ಸಾಮಾನ್ಯವೆಂಬಂತೆ ಇರುವ ಸಂಸ್ಕೃತಿ

ಜನಪದ ಸಂಸ್ಕೃತಿ ಸರ್ವರ ಸಂಸ್ಕೃತಿ, ಸಾರ್ವಕಾಲಿಕ ಸಂಸ್ಕೃತಿ. ಧರ್ಮ, ಜಾತಿ, ವರ್ಗ ಅಥವ ಶಿಷ್ಟವೆಂಬ ಸಂಸ್ಕೃತಿಗಳು ತಾತ್ಕಾಲಿಕ ಸಂಸ್ಕೃತಿಗಳು. ಯಾಕೆಂದರೆ ಅವು ಒಂದೊಂದು ವಾದ ಅಥವ ಸಿದ್ಧಾಂತದ ಮೇಲೆ ಹುಟ್ಟಿಕೊಂಡವು. ಆ ಸಿದ್ಧಾಂತಗಳು ಅಸಮಕಾಲೀನವಾದಂತೆ ಅವುಗಳನ್ನು ಆಧರಿಸಿ ಹುಟ್ಟಿದ ಸಂಸ್ಕೃತಿಯೂ ದುರ್ಬಲವಾಗುತ್ತದೆ ಇಲ್ಲವೆ ಅಪ್ರಸ್ತುತವಾಗುತ್ತದೆ. ಇದೇ ಕಾರಣಕ್ಕೆ ನಮ್ಮ ಜಾತಿ ಸಂಸ್ಕೃತಿ ಅಪ್ರಸ್ತುತ ಎಂದು ಹೇಳುತ್ತೇವೆ, ನಿತ್ಯ ಜೀವನಕ್ಕೆ ಬೇಕಾದ ಜನರ ಸಂಸ್ಕೃತಿ ಪ್ರಸ್ತುತ ಮತ್ತು ಹಿತ ಎಂದು ಹೇಳುತ್ತೇವೆ. ಜಾತಿ, ಧರ್ಮ ಸಾಯುತ್ತಿವೆ, ಅವುಗಳನ್ನು ಪುನರ್‌ಸಂಘಟಿಸಬೇಕು ಎಂದು ಯಾಕೆ ಹೇಳುತ್ತೇವೆಂದರೆ ಅವು ಸಮಕಾಲೀನವಾಗಿ ದುರ್ಬಲವಾಗುತ್ತಿವೆ ಎನ್ನುವ ಕಾರಣಕ್ಕೇ ತಾನೆ? ಜನಪದ ಸಂಸ್ಕೃತಿಗೆ ದುರ್ಬಲತೆ ಅಥವ ಸಾವು ಎಂಬುದೇ ಇಲ್ಲ. ಆದ್ದರಿಂದಲೇ ಅದನ್ನು ಉಳಿಸಬೇಕೆಂದು ಯಾರೂ ಬೊಬ್ಬೆಹಾಕುವುದಿಲ್ಲ.

ಸಾರ್ವಕಾಲಿಕ ಮತ್ತು ಸಾಮಾನ್ಯ ಎಂಬುವೆ ಸತ್ಯ ಮತ್ತು ನಿತ್ಯ. ಶಿಷ್ಟವೆಂಬುವು (ಧರ್ಮ, ಜಾತಿ, ವರ್ಗ, ಪಂಥ) ಸಕಾಲಿಕ. ಜಗತ್ತಿನ ಜೀವನ ಇತಿಹಾಸ ಇದನ್ನು ಸ್ಪಷ್ಟಪಡಿಸಿದೆ. ಭಾರತದ ಜೀವನ ಇತಿಹಾಸವನ್ನೇ ತೆಗೆದುಕೊಳ್ಳಿ :

**ಜಾತಿ ಎಂಬುದು ಪುರಾತನ ಶಿಷ್ಟ**

**ಆಧುನಿಕತೆ ಎಂಬುದು ಸಮಕಾಲೀನ ಶಿಷ್ಟ.**

ಹಿಂದೆ ಸಾಮಾನ್ಯನೊಬ್ಬ ಅಸಮಾನ್ಯ (ಶಿಷ್ಟ) ಆಗಲು ಜಾತಿಯ ಕಡೆಗೆ ಹೋಗುತ್ತಿದ್ದನು. ಉದಾಹರಣೆಗೆ : ಶೂದ್ರರ ಕಡೆಯಿಂದ ಬ್ರಾಹ್ಮಣರ ಕಡೆಗೆ ಹೋಗುತ್ತಿದ್ದ ವ್ಯಕ್ತಿಗಳು. ಪುರಂದರ ದಾಸ, ಕನಕದಾಸ, ಷರೀಫ ಇತ್ಯಾದಿ. ಹೀಗೆ ಹೋಗುವುದು ಆ ಕಾಲದವರ ಅಭಿವೃದ್ಧಿ ಪರಿಕಲ್ಪನೆ. ಬ್ರಾಹ್ಮಣ ಆಗದಿದ್ದರೂ, ಶೂದ್ರ ಬ್ರಾಹ್ಮಣ ಅನ್ನಿಸಿಕೊಳ್ಳುವ ಅಪೇಕ್ಷೆ ಇತ್ತು

ಕೆಲವರಿಗೆ. ಅದು ಅಂದು ನಿಜದ ಅಪೇಕ್ಷೆಯಾಗಿತ್ತು. ಅಪರಾಧವಾಗಿರಲಿಲ್ಲ. ಈ ಹೊತ್ತಿನ ಪ್ರಗತಿಪರ ಬ್ರಾಹ್ಮಣ, ಶೂದ್ರ ಮತ್ತು ಪಂಚಮರೂ ಸೇರಿಕೊಂಡಂತೆ ಆಧುನಿಕರಾಗಲು ಹಾತೊರೆಯುತ್ತಾರೆ. ಬೌದ್ಧಿಕವಾಗಿ ಅಥವ ಭೌತಿಕವಾಗಿ ಅನುಕೂಲ ಪಡೆದು ತಮ್ಮದೇ ಸಾಮಾನ್ಯ ಜನರಿಗಿಂತ ತಾವು ಬೇರೆಯಾಗಿ, ಭಿನ್ನವಾಗಿ ಆಧುನಿಕರಾಗಬೇಕೆಂದು ಅಥವ ಈ ಕಾಲದ ಶಿಷ್ಟರಾಗಬೇಕೆಂದು ಬಯಸುತ್ತಾರೆ. ಆದರೆ ಬಹುತೇಕ ಸಾಮಾನ್ಯರು ಕಾಲಕ್ಕೆ ತಕ್ಕ, ಎಲ್ಲರಿಗೂ ಸಲ್ಲುವ ಪ್ರಗತಿಯಿಂದ ಆಯಾಕಾಲದ ಸಾಮಾನ್ಯರಾಗಿಯೆ ಇರಲು ಇಷ್ಟಪಡುತ್ತಾರೆ. ಅವರಿಗೆ ಅದು ಅನಿವಾರ್ಯವೂ ಹೌದು. ಯಾವ ಕಾಲದಲ್ಲೂ ಯಾವ ಸಮಾಜದಲ್ಲೂ ಎಲ್ಲ ಜನರೂ ಏಕ ಕಾಲಕ್ಕೆ ಶಿಷ್ಟರಾಗಲು ಸಾಧ್ಯವಿಲ್ಲ. ಸಾಮಾನ್ಯ ಹಲವರಿಗೆ, ಶಿಷ್ಟ ಕೆಲವರಿಗೆ ಎಂಬುದು ಸಾರ್ವಕಾಲಿಕ ನಿಯಮ. ಈ ಶಿಷ್ಟದಲ್ಲಿ ಧರ್ಮಶಿಷ್ಟ, ಜಾತಿಶಿಷ್ಟ, ವರ್ಗಶಿಷ್ಟ ಮತ್ತು ಆಧುನಿಕ ಶಿಷ್ಟ ವೆಂಬ ವಿಧಗಳಿವೆ. ಜಾತಿ ಶಿಷ್ಟನಾಗಲು ಎಲ್ಲರಿಗೂ ಸಾಧ್ಯವಿಲ್ಲ. ವರ್ಗ ಅಥವ ಆಧುನಿಕ ಶಿಷ್ಟರಾಗಲು ಎಲ್ಲರಿಗೂ ಅವಕಾಶವಿದೆ. ನೈಪುಣ್ಯ ಮತ್ತು ಶ್ರಮದಿಂದ ಒಬ್ಬ ಮೇಲೇರಿ ಶಿಷ್ಟನಾಗುವುದು ಎಲ್ಲರಿಗೂ ಸಾಧ್ಯವಿದೆ. ಜಾತಿ ಮತ್ತು ಧರ್ಮದಲ್ಲಿ ಒಳಗಿನ ಜನರಿಗೆ ಈ ಅವಕಾಶ ಇದೆ. ಜಾತಿ ಹೊರಗಿನವರಿಗೆ ಈ ಅವಕಾಶ ಇಲ್ಲ.

ಇದರಿಂದ ಜನಪದ ಸಂಸ್ಕೃತಿ ಮತ್ತು ಶಿಷ್ಟ ಸಂಸ್ಕೃತಿಗಳೆರಡೂ ಅಸ್ತಿತ್ವದಲ್ಲಿವೆ. ಜನಪದ ಸಂಸ್ಕೃತಿ ಸಾಮಾನ್ಯ ಸಂಸ್ಕೃತಿ ಮತ್ತು ಸರ್ವರ ಸಂಸ್ಕೃತಿ, ಶಿಷ್ಟ ಜನಪದ ಸಂಸ್ಕೃತಿಯಿಂದ ಮೇಲೆ ಏರಿದ ಕೆಲವರ ಸಂಸ್ಕೃತಿ ಎಂದು ಅರ್ಥವಾಗುತ್ತದೆ. ಇದರಿಂದ ನಮಗೆ ಸ್ಪಷ್ಟವಾಗುವುದೇನೆಂದರೆ ಜನಪದಸಂಸ್ಕೃತಿ ಎಲ್ಲರಿಗೂ ಹತ್ತಿರವಿದೆ ಮತ್ತು ಎಲ್ಲರನ್ನೂ ಕೂಡಿಸಿಕೊಳ್ಳುತ್ತದೆ. ಶಿಷ್ಟ ಸಂಸ್ಕೃತಿ ಹಲವರಿಗೆ ದೂರವಿದ್ದು, ಕೆಲವರಿಗೆ ಹತ್ತಿರವಿದೆ. ಹಲವರಿಂದ ದೂರವಾಗುವುದೇ ಶಿಷ್ಟ ಸಂಸ್ಕೃತಿಯ ಪರಮ ಉದ್ದೇಶ ಮತ್ತು ಗುರಿ. ಎಲ್ಲರನ್ನೂ ಕೂಡಿಸಿಕೊಳ್ಳುವುದು :

ವರ್ಗ ಶಿಷ್ಟ, ಆಧುನಿಕ ಶಿಷ್ಟಗಳು ಕಳಚಿಕೊಂಡು ಸಾಮಾನ್ಯದೆಡೆಗೆ ಬಂದಾಗಲೂ, ಅದನ್ನು ಸೇರಿಸಿಕೊಂಡು ಎಲ್ಲರನ್ನೂ ಕೂಡಿಸುವುದು ಜನಪದ ಸಂಸ್ಕೃತಿ. ಅಂದರೆ :

**ಜನಪದ ಸಂಸ್ಕೃತಿ : ಕೂಡಿಸುವ ಸಂಸ್ಕೃತಿ.**

**ಶಿಷ್ಟ ಸಂಸ್ಕೃತಿ : ದೂರ ಇಡುವ ಸಂಸ್ಕೃತಿ**

ಆದರೆ ಈ ಎರಡೂ ಪರಸ್ಪರ ದೂರ, ಬೇರೆಯಾದ ಅಥವ ದ್ವೇಷಿಸುವ ಸಂಸ್ಕೃತಿಗಳಲ್ಲ. ಸಾಮಾನ್ಯ ಸಂಸ್ಕೃತಿಯಿಂದ ಶಿಷ್ಟ ಬೆಳೆದ ಸಂಸ್ಕೃತಿಯಾಗಿದೆ, ಸಾಮಾನ್ಯ ಸಂಸ್ಕೃತಿ ಶಿಷ್ಟವನ್ನು ಬೆಳೆಸುತ್ತದೆ, ಅದು ಕುಸಿದಾಗ ತನ್ನಲ್ಲಿ ಸೇರಿಸಿಕೊಳ್ಳುತ್ತದೆ. ಈ ಎರಡೂ ಒಂದು ಮಹಾನ್ ಕ್ರಿಯಾ ಶೀಲ ಸಂಸ್ಕೃತಿಯ ಅನ್ಯೋನ್ಯ ಹಾಗೂ ಅಪೇಕ್ಷಿತ ಅಸ್ತಿತ್ವಗಳು.

ಜನಪದ ಸಂಸ್ಕೃತಿಯೊಂದನ್ನೆ ಅಥವ ಶಿಷ್ಟ ಸಂಸ್ಕೃತಿಯೊಂದನ್ನೆ ಪ್ರತ್ಯೇಕ ಪ್ರತ್ಯೇಕವಾಗಿ ಇಟ್ಟು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ಅವುಗಳ ಪ್ರತ್ಯೇಕ ಅಸ್ತಿತ್ವ ಮತ್ತು ಪರಸ್ಪರ ಕ್ರಿಯಾಶೀಲತೆಯಲ್ಲಿ ಮಾತ್ರ ಅವುಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ಅದು ಕಾರಣವಾಗಿ ಕೆಲವು ಸಾಂದರ್ಭಿಕ ಸನ್ನಿವೇಶಗಳ ಜೊತೆಗೆ ಅವುಗಳನ್ನು ವಿವರಿಸುತ್ತೇನೆ.

## 1. ಸಂಸ್ಕೃತಿ : ಪಾಳ್ಯೇಗಾರಿಕೆ

ಜನಪದ ಸಂಸ್ಕೃತಿಯನ್ನು ಮೊತ್ತದಲ್ಲಿ ನೋಡಬಾರದು ಎಂದೆ. ಯಾಕೆಂದರೆ ಜನಪದರಿಗೆ ಅದು ಉಪಯೋಗಕ್ಕೆ ಬಾರದ್ದು. ಜಾತಿ, ಧರ್ಮ, ಚಕ್ರವರ್ತಿ, ರಾಜ, ಪಾಳ್ಯೇಗಾರ, ಯಜಮಾನ, ಮಾಲೀಕ, ಉದ್ಯಮಪತಿ, ಮಾರ್ವಾಡಿ – ಈ ಬಗೆಯ ಸಾಂಸ್ಕೃತಿಕ–ಆರ್ಥಿಕ ಯಜಮಾನರನ್ನು ಕಂಡರೆ ಜನ ಕೆಟ್ಟದಾಗಿ 'ಆಡಿಕೊಳ್ಳು'ತ್ತಾರೆ. ಪಾಳ್ಯೇಗಾರನ ಥರದ ಸ್ಥಾನದವರು ಜನಪರವಾಗಿ ಕೆಲಸ ಮಾಡಿದ್ದರೆ ಅವರನ್ನು ತಮ್ಮ ಜೀವನ ಕಥನದ ಭಾಗವಾಗಿ ಮಾಡಿಕೊಳ್ಳುತ್ತಾರೆ. ನಮ್ಮ ಜನಪದ ಕಥನ

ಗೀತೆಗಳಲ್ಲಿ ಈ ಬಗೆಯ ವಸ್ತುವಿದೆ. ಆದರೆ ಅದೇ ಪಾಳ್ಳೇಗಾರ ದುಷ್ಟನಾಗಿದ್ದರೆ ಅವನ ಬಗ್ಗೆ ದಾಖಲಿಸುವುದು ಇರಲಿ, ಅವನನ್ನು 'ತೇವಲು ಭಾಷೆ'ಗೆ ಬಳಸಿಕೊಳ್ಳುತ್ತಾರೆ.

ಕರ್ನಾಟಕದ ಜನಪದ ನೃತ್ಯಗಳಲ್ಲಿ 'ಪಾಳ್ಳೇಗಾರನ ಕುಣಿತ' ಎಂಬ ಕಲೆಯೊಂದು ದಾಖಲಾಗಿದೆ. ಅದು ಪಾಳ್ಳೇಗಾರನ ವೇಷ. ವೇಷಧಾರಿ ತಲೆಗೆ ಪೇಟ, ಮುಖದಲ್ಲಿ ಭರ್ಜರಿ ಮೀಸೆ, ಸೊಂಟಕ್ಕೆ ಪಗ್ಗ, ಕಾಲಿಗೆ ಕಬ್ಬಿಣದ ಸರಪಳಿ, ಕೈಯಲ್ಲಿ ಮಚ್ಚು ಹಿಡಿದು ನೃತ್ಯ ಮಾಡುತ್ತಾನೆ. ಅವನ ಅಬ್ಬರದ ಕುಣಿತ ಜನರನ್ನು ಆಕರ್ಷಿಸುತ್ತದೆ. ಅದು ಕುಣಿತ, ವೇಷ ಎಲ್ಲದರಲ್ಲೂ ಪಾಳ್ಳೇಗಾರನ ಸಂಸ್ಕೃತಿಯನ್ನು ಪ್ರತಿನಿಧಿಸುತ್ತದೆ. ಆದರೆ ಆ ಸಂಸ್ಕೃತಿಯನ್ನು ನೆರೆದವರೆಲ್ಲ ಒಂದೇ ಅರ್ಥದಲ್ಲಿ ಸ್ವೀಕರಿಸುವುದಿಲ್ಲ.

1) ಮಕ್ಕಳು ಆ ವೇಷವನ್ನು ಬೆರಗು ಮತ್ತು ಬೆದರಿಕೆಯ ಕಣ್ಣಿನಿಂದ ನೋಡುತ್ತಾರೆ. ಅದು ಹಿರೋ ಆಗಿ ಕಾಣಿಸುತ್ತದೆ. ಆ ಮಕ್ಕಳಲ್ಲಿ ದೈಹಿಕ ಚೈತನ್ಯವನ್ನು ಉಂಟುಮಾಡುತ್ತದೆ. ಆದರೆ ಆ ವೇಷ ಯಾಕೆ ಎಂದು ಅವು ಪ್ರಶ್ನಿಸಿಕೊಳ್ಳುವುದಿಲ್ಲ, ಯಥಾವತ್ತಾಗಿ ತೆಗೆದುಕೊಳ್ಳುತ್ತವೆ.

2) ಅಲ್ಲಿ ನೆರೆದಿದ್ದ ಗಂಡಸರಿಗೆ ಆ ವೇಷ ತಮ್ಮ ಪುರುಷತ್ವದ ಪ್ರತೀಕವಾಗಿ ಕಾಣುತ್ತದೆ. ತಮಗಿಂತ ಕೆಳಗಿನವರ ಮೇಲೆ ಹೇರಿ ಯಜಮಾನಿಕೆ ನಡಸಬಹುದು; ತಮ್ಮ ಹೆಂಡಿರನ್ನು ಸೇರಿಸಿಕೊಂಡಂತೆ –ಎಂದು ಮಾರ್ಗದರ್ಶನ ಪಡೆಯುತ್ತಾರೆ.

3) ಕೃಷಿ ಕೂಲಿಗಳು ಆ ವೇಷದ ಆರ್ಭಟದ ಹಿಂದೆ ಇದ್ದ ಹಿಂಸೆ–ಶೋಷಣೆಯನ್ನು ನೆನಸಿಕೊಳ್ಳುತ್ತಾರೆ. ಇವನ ಆರ್ಭಟವೇ ನಮ್ಮ ಮೇಲಿನ ಹಿಂಸೆ ಎಂಬುದನ್ನು ಆ ಸ್ಥಳದಲ್ಲಿ ಮನನಮಾಡುತ್ತಾರೆ.

4) ದುಡಿವ ಹೆಣ್ಣು ಮಕ್ಕಳಲ್ಲಿ ಕೆಲವರಾದರೂ ಈ ಮುಂಡೇ ಮಗ

ತನ್ನ ಆರ್ಭಟದಲ್ಲಿ ಎಷ್ಟು ಮಹಿಳೆಯರನ್ನು ಹಾಳುಮಾಡಿದ್ದಾನೋ ಎಂದು ಗೊಣಗಿಕೊಳ್ಳಲೂಬಹುದು.

5) ಪ್ರಜಾಪ್ರಭುತ್ವಕ್ಕೆ ಕಾಲಿಟ್ಟ ಪ್ರೇಕ್ಷಕ: ಇದು ಪ್ರಜೆಗಳ ಕಾಲ, ಪಾಳ್ಳೇಗಾರರ ಕಾಲ ಮುಗಿಯಿತು. ಇಂಥವರ ಆರ್ಭಟವೆಲ್ಲ ಮುಗಿದುಹೋಯಿತು. ಇವನ ಪರಾಕ್ರಮಕ್ಕೆ ಏನು ಬೆಲೆ, ಹುಲಿಯ ಮುಂದೆ ಇಲಿ ಗರ್ಜಿಸಿದಂತಾಯಿತು ಎಂದು ತಮಾಷೆ ಮಾಡಿಕೊಂಡು ಹೋಗಬಹುದು.

ಇಂಥ ಬಹುಜನರ ಪ್ರತಿಕ್ರಿಯೆಯೆ ಇಲ್ಲಿಯ ನಿಜವಾದ ಸಂಸ್ಕೃತಿ ಕ್ರಿಯಾಶೀಲತೆಯೆ ಹೊರತು, ಪಾಳ್ಳೇಗಾರನೆಂಬ ಏಕಸಂಸ್ಕೃತಿಯ ಪ್ರದರ್ಶನವಲ್ಲ. ಮೊತ್ತ ಸಂಸ್ಕೃತಿ ಪಾಳ್ಳೇಗಾರಿಕೆಯನ್ನು ಎತ್ತಿಹಿಡಿಯುತ್ತಿದ್ದರೂ ಜನಪದ ಸಂಸ್ಕೃತಿ ಆ ಏಕತೆಯನ್ನು ಒಡೆದು ಜನ ಸಂಬಂಧಿಯಾದ ಬಹುತ್ವದಲ್ಲಿ ವಿವರಿಸಿಕೊಳ್ಳುತ್ತದೆ. ಹೀಗೆ ಜನಪದ ಸಂಸ್ಕೃತಿ ಪ್ರಯೋಗ (practice) ದಲ್ಲಿ ಇರುತ್ತದೆಯೇ ಹೊರತು, ಯಾವುದೇ ಬಗೆಯ ದತ್ತಾಂಶದಲ್ಲಿ ಅಡಗಿ ಕುಳಿತಿರುವುದಿಲ್ಲ. ಆದ್ದರಿಂದ ಜನಪದ ಸಂಸ್ಕೃತಿಯನ್ನು ಅದರ ಸಾಂದರ್ಭಿಕ ಚಲನೆಯಲ್ಲಿ ಗುರುತಿಸಬೇಕು.

ಅಂಥ ಸಂದರ್ಭಗಳನ್ನು ಗಮನಿಸಿ : ಜನಪದ ಸಂಸ್ಕೃತಿ –ಶಿಷ್ಟ ಸಂಸ್ಕೃತಿಯ ಮುಖಾಮುಖಿ : ಜನಪದ ಸಂಸ್ಕೃತಿಯ ಅನಾವರಣ.

## 1. ಧಾರ್ಮಿಕತೆಯ ಜೊತೆಗೆ :

ಒಬ್ಬ ಪೂಜಾರಿ ದೇವಸ್ಥಾನಕ್ಕೆ ಪೂಜೆ ಮಾಡಲು ಹೋಗುತ್ತಿದ್ದಾನೆ. ಎದುರಿಗೆ ಹೊರಕೇರಿಯ ತಿಮ್ಮಿ ಸಿಕ್ಕಿದಳು. ಪೂಜಾರಿಗೆ ಸಿಟ್ಟು ಬಂತು, ದೂರ ಇರೆ ಎಂದು ಗದರಿಸಿ ಮುಂದೆ ಹೋದ. ತಿಮ್ಮಿ ಇವನ್ಯಾಕೆ ಇಂಗಾಡ್ತಾನೆ ಎಂದು ಕೊಂಡಳು. ಪೂಜೆ ಮುಗಿಸಿದ ಪೂಜಾರಿ ಅದೇ ದಾರಿಯಲ್ಲಿ ವಾಪಸು ಬರುತ್ತಿದ್ದಾನೆ. ತಿಮ್ಮಿ ಕರೆದಳು : 'ಬನ್ನಿ ಸೋಮಿ

ಹಾಲು ಕುಡಿದು ಹೋಗಿವ್ರಂತೆ ! 'ಇಲ್ಲ ಕಣೆ ತಿಮ್ಮಿ, ಬರ್ತಿದ್ದೆ ಜರೂರು ಮನೆಗೆ ಹೋಗಬೇಕು' ಎಂದು ಹೇಳಿ ಹೊರಟು ಹೋದನು.

'ದೂರ ಇರೆ', ಶಿಷ್ಟ ಸಂಸ್ಕೃತಿ. ದೂರವಾಗುವುದು. 'ಬನ್ನಿ ಸೋಮಿ', ಜನಪದ ಸಂಸ್ಕೃತಿ. ಕೊಡಿಕೊಳ್ಳಲು ಇಷ್ಟಪಡುವುದು. 'ದೂರ ಇರೆ', ಮೊತ್ತದ ಸಂಸ್ಕೃತಿ ಹೇಳಿಕೊಟ್ಟ ಪಾಠ. ಅದು ನಿಜಜೀವನ ಅಲ್ಲ, ತಾತ್ಕಾಲಿಕ. ತಿಮ್ಮಿ ಜನಪದ ಸಂಸ್ಕೃತಿಯ ಕ್ರಿಯೆ. ಅದನ್ನು ಸಿಡಿಮಿಡಿಗೊಳ್ಳುವ ಮೂಲಕ ಪ್ರತಿಭಟಿಸಿದಳು. ಆದರೆ ಪೂಜಾರಿ ತನಗಿಂತ ತಿಳಿದವನು ಎಂದು ನಂಬಿ ಅವನನ್ನು ತನ್ನ ಸಂಸ್ಕೃತಿಗೆ, ಹಾಲು ಕುಡಿಯಲು ಆಹ್ವಾನಿಸಿ ಕೂಡಿಕೊಳ್ಳುವ ಮನಸ್ಸು ತೋರಿದಳು. ಕೊನೆಯಲ್ಲಿ ಯಾರೂ ಶ್ರೇಷ್ಠರಾಗಲಿಲ್ಲ, ಸಹಜತೆಯತ್ತ ನಡೆದರು. ಕೂಡಿ ಬಾಳುವ ಸಂಸ್ಕೃತಿಯತ್ತ ನಡೆದರು. ಅದುವೆ ಜನಪದ ಸಂಸ್ಕೃತಿ.

## 2. ವರ್ಗದ ಜೊತೆಗೆ :

ಮೈಸೂರಿನಿಂದ ಬೆಂಗಳೂರಿಗೆ ಹೈಟೆಕ್ ಬಸ್ಸಿನಲ್ಲಿ ಒಬ್ಬ ಪ್ರಯಾಣಿಕ ಹೊರಟ. ಅವನು, ಅವನ ಪಕ್ಕದಲ್ಲಿ ಕೂತಿರುವ ಪ್ರಯಾಣಿಕನನ್ನು ಮಾತನಾಡಿಸುತ್ತಿಲ್ಲ. ಯಾಕೆಂದರೆ ಅವನು ಕ್ಲಾಸ್ ಟು ನೌಕರನಿರಬಹುದು ಎಂದು. ಅವನ ಪಕ್ಕದ ವ್ಯಕ್ತಿ, ಅವನ ಪಕ್ಕದ ಸೀಟಿನಲ್ಲಿರುವವನನ್ನು ಮಾತನಾಡಿಸುವುದಿಲ್ಲ. ಯಾಕೆಂದರೆ ಅವನು ಕ್ಲಾಸ್ ತ್ರಿ ನೌಕರ ಇರಬಹುದೆಂದು. ಬೆಂಗಳೂರಿನಲ್ಲಿ ಬಸ್ ಇಳಿದಾಗಲೂ ಅವರ ಮಧ್ಯೆ ಮಾತುಕತೆ ಇಲ್ಲ. ಕ್ಲಾಸ್ ಒನ್ ನೌಕರ ಮನೆಗೆ ಹೋದ. ಹೆಂಡತಿ ಕೇಳಿದಳು. 'ಹೇಳಿದ್ದೆನಲ್ಲ, ಮೈಸೂರಿನಿಂದ ಮಲ್ಲಿಗೆ ದಂಡೆ ತನ್ನಿ ಎಂದು ತಂದಿರಾ'. ತಂದಿಲ್ಲ. ಅವಳು ಅಂದಳು : 'ಏನ್ ಕ್ಲಾಸ್ ಒನ್ ಆಫೀಸರೋ ನೀವು, ಒಂದು ಮಲ್ಲಿಗೆ ದಂಡೆ ತರಲಾಗಲಿಲ್ಲ. ನಿಮ್ಮ ಅಟೆಂಡರ್‌ಗೆ ಹೇಳಿದ್ದರೆ ತಂದುಕೊಡುತ್ತಿದ್ದ ಅವನೆ ವಾಸಿ' ಅಂತ.

ಒಂದು ಸೆಟಲ್ ಬಸ್ಸಿನಲ್ಲಿ ಮೈಸೂರಿನಿಂದ ಒಬ್ಬ ಸಾಮಾನ್ಯ

ಪ್ರಯಾಣಿಕ ಹೊರಟ. ದಡದಡ ಅಂತ ಬಸ್ ಹತ್ತಿದವನೆ ಒಂದು ಸೀಟಿನಲ್ಲಿ ಕುಳಿತ. ಪಕ್ಕದಲ್ಲಿ ಆಗಲೇ ಕುಳಿತಿದ್ದವನನ್ನು ಕೇಳಿದ : 'ಎಲ್ಲಿಗೆ, ಸ್ವಾಮಿ ತಾವು, ಏನು ಜಂಬ್ರವೊ ? ನಾನು ಬೆಂಗ್ಳೂರ್ಗೆ ಹೋಗ್ತಾ ಇದ್ದೀನಿ. ನನ್ನ ತಂಗೆ ಕೊಟ್ಟಿರದು ಅಲ್ಗೆಯ. ಅವ್ಳ ಮಗ್ಳು, ನನ್ನ ಮೊಮ್ಮಗಳ್ಳು ನೆರ್ದವ್ಳಂತೆ, ಅದ್ಕೆ ಹೊರಟೆ, ಸುಮ್ನಿರಕಾಗತ್ತ ರಕ್ತ ಸಂಬಂಧ......

ಮೊದಲ ಸಂದರ್ಭ ನೋಡಿ. ಒಬ್ಬರಿಗೊಬ್ಬರು ದೂರ. ಎಲ್ಲಿ ತನ್ನ ಕ್ಲಾಸ್ ಸ್ಟಾಂಡರ್ಡ್ ಹೋಗಿ ಬಿಡುತ್ತೊ ಎಂಬ ಬಿಗುಮಾನ. ತನ್ನ ಕ್ಲಾಸನ್ನು ಕಾಪಾಡಿಕೊಳ್ಳಬೇಕೆಂಬ ಒಣ ಹಟ. ಆದರೆ ಆ ಕ್ಲಾಸ್ ಒನ್ ನೌಕರನ ಕ್ಲಾಸನ್ನು ಅವನ ಹೆಂಡತಿ ಒಡೆದು ಅಟೆಂಡರ್ ಸ್ಟಾಂಡರ್ಡ್‌ಗೆ ಇಳಿಸಿ ಬಿಟ್ಟಳು. ಗಂಡ ಕ್ಲಾಸ್ ಒನ್, ಹೆಂಡತಿ ಕ್ಲಾಸ್ ಲೆಸ್; ಜನಪದೆ. ಯಾಕಂದರೆ ಹೆಣ್ಣು ಸೃಜನಮೂಲ ಸಂಸ್ಕೃತಿ. ಸೃಷ್ಟಿಗೆ ಕ್ಲಾಸ್ ಗೀಸ್ ಇಲ್ಲ. ಕ್ಲಾಸ್ ಗಂಡು ಪ್ರಧಾನ ಸಮಾಜ ಮಾಡಿಕೊಂಡದ್ದು. ಅವನು ಹೆಂಡತಿ ಜೊತೆ ಕೂಡುವಾಗ ತನ್ನ ಕ್ಲಾಸ್ ತೋರಿಸಲು ಆಗುತ್ತಾ?

ಸೆಟಲ್ ಬಸ್‌ನಲ್ಲಿ ಹೊರಟವನ ಪಕ್ಕದಲ್ಲಿ ಯಾವನಾದರೂ ಕ್ಲಾಸ್ ಒನ್ ಅಥವ ಟು ಇದ್ದಿದ್ದರೆ : 'ಇವ್ನು ಎಲ್ಲಿಗಾದ್ರೂ ಹಾಳಾಗಿ ಹೋಗ್ಲಿ ಇವ್ನು ಎಲ್ಲಿಗೆ ಹೋಗ್ತಿಯ ಅಂತ ಕೇಳ್ದರು ಯಾರು ? ಇವನಿಗೆ ತಂಗಿನ ಬೆಂಗಳೂರಿಗೆ ಕೊಡು ಅಂತ ನಾನೇನು ಹೇಳಿದ್ದೆನಾ. ಅವನ ಮೊಮ್ಮಗಳ ಮೈನೆರ್ದ ಶಾಸ್ತ್ರಕ್ಕೆ ಅವನು ಹೋದರೆಷ್ಟು ಬಿಟ್ಟರೆಷ್ಟು' ಎನ್ನುತ್ತಿದ್ದ. ಆದರೆ ಆ ಸಾಮಾನ್ಯ ಬಿಡಬೇಕಲ್ಲ. ಅವನಿಗೆ ಬೇರೆಯವ, ದೂರದವ ಎಂಬ ಒಡಕು ಇಲ್ಲ. ಪಕ್ಕದಲ್ಲಿರುವವನು ಪಕ್ಕದವನೆ ದೂರದವನು ಹೇಗಾಗುತ್ತಾನೆ ಎಂಬುದು ಅವನ ನಿಚ್ಚಳ ತಿಳುವಳಿಕೆ

'ಪಕ್ಕದವನು ಯಾವ ಕ್ಲಾಸೊ'? ಶಿಷ್ಟ ಸಂಸ್ಕೃತಿ
ಎಲ್ಗೆ ಸ್ವಾಮಿ ತಾವು ? ಜನಪದ ಸಂಸ್ಕೃತಿ.

## 3. ಆಧುನಿಕತೆಯ ಜೊತೆಗೆ

ನಗರದ ಕಾಲೇಜು ಮುಂದೆ ರಸ್ತೆಯಲ್ಲಿ ಬೈಕ್‌ನಲ್ಲೊ, ಕಾರಿನಲ್ಲೊ ಹೋಗಿ. ನಡುರಸ್ತೆಯಲ್ಲೆ ವಿದ್ಯಾರ್ಥಿಗಳು ನಿಂತಿರುತ್ತಾರೆ. ಅವರು ಸುಲಭದಲ್ಲಿ ದಾರಿಬಿಟ್ಟು ಕೊಡುವುದಿಲ್ಲ. ಹಸ್ತ ತೋರಿಸಿ ಗಾಡಿ ನಿಲ್ಲಿಸಿ ಆಮೇಲೆ ಬಿಟ್ಟು ಕಳಿಸುತ್ತಾರೆ. ನಮ್ಮ ಹಳ್ಳಿಗಳ ರಸ್ತೆಯಲ್ಲಿ ಎಮ್ಮೆ, ದನ ಹೀಗೆ ನಿಂತಿರುತ್ತವೆ. ಅಲ್ಲೆ ವಿಸರ್ಜನೆ ಮಾಡಿಕೊಳ್ಳುತ್ತವೆ. ನಮ್ಮ ಈ ಕಾಲೇಜು ಹುಡುಗರೂ ಹಾಗೆಯೇ : ತಿಂದ ಚಾಕಲೇಟ್, ತಿಂಡಿಯ ಪ್ಲಾಸ್ಟಿಕ್ ಕವರ್‌ಗಳನ್ನು ರಸ್ತೆ ಮಧ್ಯೆಯೆ ಎಸೆಯುತ್ತಾರೆ. ಅವರಿಂದ ಇತರರ ಬಗ್ಗೆ ದಿವ್ಯ ನಿರ್ಲಕ್ಷ. ತಮಗಿಂತ ಬೇರೆಯವರಿಲ್ಲ, ನಮ್ಮದೇ ಜಾಗ, ನಮ್ಮದೆ ಕಾಲ ಎಂಬ ಧೋರಣೆ, ಹಮ್ಮು ಅಥವ ಯಡ್ಡತನ.

ಹಳ್ಳಿಯ ದಾರಿಯಲ್ಲಿ ಹೋಗಿ ಮುದುಕರಾದರೆ ದಾರಿಬಿಟ್ಟು ಕೊಡುತ್ತಾರೆ. ಹೆಣ್ಣು ಮಕ್ಕಳಾದರೆ ದಾರಿಬಿಟ್ಟು ದೂರ ಹೋಗುತ್ತಾರೆ. ಯಾವೂರಾಯ್ತು, ಎಲ್ಗೆ ಹೊಂಟ್ರಿ, ಯಾರ ಮನೆಗೋ ? ಏನು ಜಂಮ್ರವೊ? ಒಳ್ಳೆದಾಗ್ಲಿ ಹೋಗಿ ಬನ್ನಿ.

ನಮ್ಮದೆ ಜಾಗ, ನಮ್ಮದೆ ಕಾಲ : ಆಧುನಿಕ ಶಿಷ್ಟ ಸಂಸ್ಕೃತಿ.

ಒಂದೇ ದಾರಿ : ಕಥೆ ಕೇಳಿ.

1) ಆ ಕಡೆಯಿಂದ ಒಬ್ಬ ದಡ್ಡ, ಈ ಕಡೆಯಿಂದ ಮತ್ತೊಬ್ಬ ದಡ್ಡ : ನೀನು ದಾರಿ ಬಿಡು ನೀನು ದಾರಿ ಬಿಡು ಎಂದು ಗುದ್ದಾಡಿದರು: ದಡ್ಡರಿಗೆ ದಾರಿ ಇಲ್ಲ.

2) ಆ ಕಡೆಯಿಂದ ಒಬ್ಬ ದಡ್ಡ ಬರುತ್ತಿದ್ದ. ಈ ಕಡೆಯಿಂದ ಒಬ್ಬ ವಿವೇಕಿ ಹೋಗುತ್ತಿದ್ದ. ದಡ್ಡ ದಾರಿ ಬಿಡಲಿಲ್ಲ. ವಿವೇಕಿ ಮತ್ತೊಂದು ದಾರಿ ಮಾಡಿಕೊಂಡು ಹೋದ.

3) ಈ ಕಡೆಯಿಂದ ಒಬ್ಬ ವಿವೇಕಿ. ಆ ಕಡೆಯಿಂದ ಮತ್ತೊಬ್ಬ

ವಿವೇಕಿ. ಮೂರು ದಾರಿಗಳಾದವು.

—ಇದು ಜನಪದ ಸಂಸ್ಕೃತಿ. ಅಂದರೆ ಗ್ರಾಮೀಣ ಸಂಸ್ಕೃತಿ ಎಂದಷ್ಟೇ ತಿಳಿಯಬಾರದು. ಹೊಂದಿಕೊಂಡು ಹೋಗುವ ಸಂಸ್ಕೃತಿ.

ಜನಪದರು ಹೊಂದಿಕೊಂಡೇ ಹೋಗಬೇಕು. ಅವರಿಗೆ ಸಿದ್ಧಾಂತಿಯಂಥ ವಾದವಿಲ್ಲ, ಉದ್ಯಮಪತಿಯಂತೆ ಬಂಡವಾಳವಿಲ್ಲ, ಯಜಮಾನನಂತೆ ಅಧಿಕಾರವಿಲ್ಲ, ರಾಜಕಾರಣಿಯಂತೆ ರಕ್ಷಣೆಗೆ ಪೋಲಿಸರಿಲ್ಲ. ಸುಲಭ ರಕ್ಷಣೆಗೆ ಕಾನೂನು ನೆರವು ಇಲ್ಲ. ಅವನು ಬೇರೆಲ್ಲರ ಜೊತೆ ಹೊಂದಿಕೊಂಡೇ ಹೋಗಬೇಕು. ಯುದ್ಧ ಮಾಡಿ ಗೆಲ್ಲಲು ಅವನಲ್ಲಿ ಆಯುಧಗಳಿಲ್ಲ. ಲಂಚಕೊಡಲು ಕಳ್ಳ ಹಣವಿಲ್ಲ. ಕೂಡಿ ಬಾಳಿದರೆ ಜೀವನ, ಅದೇ ಸ್ವರ್ಗ ಎಂದು ತಿಳಿದವನು. ಆದ್ದರಿಂದಲೇ ಜನಪದ ಜೀವನ (ಸಂಸ್ಕೃತಿ) ಉಳಿದಿದೆ. ಅದು ಬಹುಜನರ ಆಸ್ತಿಯಾಗಿದೆ. ನಿಜವಾದ ಜೀವನವೆ ಅದು, ಉಳಿದುವೆಲ್ಲ ನಕಲಿ.

ಸಂಸ್ಕೃತಿಯನ್ನು ಒಡೆದು ನೋಡುವ ಅಗತ್ಯ ಇಲ್ಲ. ಬುಡಕಟ್ಟು, ರೈತಾಪಿ, ನಗರ ಅಥವ ಆಧುನಿಕ ಸಂಸ್ಕೃತಿಗಳು ತೀರಾ ಭಿನ್ನವಾದ ನೆಲೆಯಲ್ಲಿ ನಿಂತಿರುವುದಿಲ್ಲ. ಅತ್ಯಂತ ಆಧುನಿಕರೊಳಗೂ ಒಬ್ಬ ಬುಡಕಟ್ಟು ಮನುಷ್ಯ ಇರುತ್ತಾನೆ. ಬುಡಕಟ್ಟು ವ್ಯಕ್ತಿಗೂ ಬೆಳೆಯುವ ಕ್ರಿಯೆ ಇರುತ್ತದೆ. ಆಧುನಿಕ ಓಡುವ ಮನುಷ್ಯನ ಸ್ಥಿತಿಯಿಂದ ನೋಡಿದಾಗ ನಡೆವ ಮನುಷ್ಯ ಅಪರಾಧಿಯಂತೆ ಕಾಣಬಹುದು. ನಿಜದಲ್ಲಿ ಜೀವನಕ್ರಮವನ್ನು ನಡಿಗೆಯ ನೆಲೆಯಿಂದಲೆ ಗುರುತಿಸಿಕೊಳ್ಳಬೇಕು. ಈ ಹೊತ್ತಿನ ಎಲ್ಲ ಸಮುದಾಯಗಳೂ ನಡಿಗೆಯಲ್ಲಿವೆ. ಅವುಗಳ ಜೀವನ ಸಂಸ್ಕೃತಿ ಕ್ರಿಯಾಶೀಲವಾಗಿದೆ ಮತ್ತು ಅದು ಪ್ರಸ್ತುತವೂ ಆಗಿದೆ. ಸಾಂಸ್ಕೃತಿಕ ಮಿಶ್ರಣದ ಕ್ರಮವೇನಿದ್ದರೂ ಅದರ ಸ್ವರೂಪವನ್ನು ತಿಳಿದುಕೊಳ್ಳಲು ಮಾತ್ರ, ಆ ವಿಭಾಗ ಕ್ರಮವೆ ಸಂಸ್ಕೃತಿಯ ಮೌಲ್ಯಮಾಪನ ಅಲ್ಲ. ಸಂಸ್ಕೃತಿ ಕ್ರಿಯೆಯಲ್ಲಿ ಸಾಂಸ್ಕೃತಿಕ ಪರಿಕರಗಳೆಲ್ಲ ಸಹವರ್ತಿಗಳಷ್ಟೆ. ನಮ್ಮ ಅನುಕೂಲಕ್ಕೆ ಸಂಸ್ಕೃತಿ

ಮನೋಸಂಗತಿಗಳು (Mentifacts) ಸಾಂಘಿಕ ಸಂಗತಿಗಳು(Socifacts) ವಸ್ತು ಕಲಾ ಸಂಗತಿಗಳು (Artifacts) ಎಂದು ಗುರುತಿಸಿಕೊಳ್ಳುತ್ತೇವೆ.

ಒಂದು ಸಂಸ್ಕೃತಿ ಕ್ರಿಯೆಯನ್ನು ಗುರುತಿಸಿದರೆ ಈ ಎಲ್ಲ ಸಂಗತಿಗಳು (facts) ಪ್ರತ್ಯೇಕವಾಗಿ ನಿಂತು ತಮ್ಮನ್ನು ಗುರುತಿಸಿಕೊಳ್ಳಲಾರವು. ಒಂದು ಸಂಸ್ಕೃತಿ ಕ್ರಿಯೆಯಲ್ಲಿ ಅವೆಲ್ಲ ಒಟ್ಟಿಗೆ ಕಾರ್ಯನಿರ್ವಹಿಸುತ್ತಿರುತ್ತವೆ. ಜನಪದ ಸಂಸ್ಕೃತಿಯ ವಿಷಯದಲ್ಲಿ ಇದು ಸಾಮಾನ್ಯ ನಿಯಮ. ಇವುಗಳನ್ನು ಪರಿಷ್ಕರಿಸಿ (ಶಿಷ್ಟೀಕರಿಸಿ) ಬಳಸಿಕೊಳ್ಳುವಾಗ ಅವುಗಳನ್ನು ಹೆಕ್ಕಿ ತೆಗೆದು, ಹೊಸ ಅವಸ್ಥೆ ಕೊಟ್ಟು ಪ್ರತ್ಯೇಕಿಸಿಕೊಳ್ಳುವುದು ಆವಿಷ್ಕೃತ ಸಮಾಜದ ಸ್ವಭಾವ ಮತ್ತು ಅಪೇಕ್ಷೆ. ಇದು ಒಂದು ರೀತಿಯಲ್ಲಿ ಸಂಸ್ಕೃತಿಯ ಹೈಬ್ರಿಡೀಕರಣ. ಆದರೆ ಅದು ತಾತ್ಕಾಲಿಕ. ಸಂಸ್ಕೃತಿಯ ಯಾವುದೇ ಸಂಗತಿಗಳು ಅದರ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡೆ ತಮ್ಮ ಸಾರ್ಥಕತೆಯನ್ನು ಪಡೆಯಬೇಕಾಗುತ್ತದೆ. ಆದ್ದರಿಂದ ಸಂಸ್ಕೃತಿ ಎನ್ನುವುದು ಪ್ರತ್ಯೇಕವಾಗಿ ವ್ಯಕ್ತಿಯೂ ಅಲ್ಲ, ವಸ್ತುವೂ ಅಲ್ಲ; ಜನರ ತೊಡಗಿಸಿಕೊಳ್ಳುವಿಕೆಯಲ್ಲಿ ಕಾಣುವ ನಡವಳಿಕೆ. ಅದು ಜನಪದ ಸಂಸ್ಕೃತಿಯ ಅಂದರೆ, ಜೀವನ ಸಂಸ್ಕೃತಿಯ ಸಹಜತೆ. ಮೋಜಿನ ಸಂಸ್ಕೃತಿಯ ರೀತಿಯೆ ಬೇರೆ.

ಜನಪದ ಸಂಸ್ಕೃತಿ ಸಂದರ್ಭವೊಂದನ್ನು ಆಯ್ದುಕೊಂಡು ಅದರಲ್ಲಿ ಹೇಗೆ ತನ್ನ ರೂಪವನ್ನು ಸಾದರಪಡಿಸುತ್ತದೆ ಎಂಬುದೆ ಅದರ ಅಸಲಿತನ. ಜನಪದ ಸಂಸ್ಕೃತಿಯಲ್ಲಿ ನಡೆಯುವುದು ಇದೇ ಪ್ರಕ್ರಿಯೆ. ಜನಪದ ಸಂಸ್ಕೃತಿಯನ್ನು ಸಾಮಗ್ರಿಗಳಲ್ಲಿ ನೋಡದೆ, ಅವು ಜೀವನ ಪ್ರಕ್ರಿಯೆಯಲ್ಲಿ ಭಾಗವಹಿಸುವ ವಿನ್ಯಾಸವನ್ನು ನೋಡುತ್ತ ಅರ್ಥಮಾಡಿಕೊಳ್ಳಬೇಕು. ಅಂಥ ಪ್ರಯತ್ನವನ್ನು ಬೇರೆ ಬೇರೆ ಸಾಂಸ್ಕೃತಿಕ ಸಂದರ್ಭಗಳನ್ನು ಎತ್ತಿಕೊಂಡು ನಿರೀಕ್ಷಿಸುವ ಪ್ರಯತ್ನವನ್ನು ನಾನಿಲ್ಲಿ ಮುಂದುವರಿಸುತ್ತೇನೆ.

**ಜನಪದ ಸಂಸ್ಕೃತಿಯೊಳಕ್ಕೆ 'ಬ್ರಾಹ್ಮಣ' ಬರುತ್ತಿದ್ದಾನೆ.**

ಇದು ಬ್ರಾಹ್ಮಣ ಜನಪದ ಸಂಸ್ಕೃತಿಯ ನಂಬಿಕೆ ಮತ್ತು ನಡವಳಿಕೆಯಾಗುವ ಕ್ರಿಯೆ.

ಜನಪದ ಸಂಸ್ಕೃತಿಯ ಹೊರಗೆ ಬ್ರಾಹ್ಮಣ ಏನೆಂಬುದು ನಮಗೆಲ್ಲ ಗೊತ್ತು. ಆತ ಜನಪದ ಸಂಸ್ಕೃತಿಯಿಂದ ಮೇಲೇರಿ ತನ್ನನ್ನು ಪರಿಷ್ಕೃತ (ಶಿಷ್ಟ)ಗೊಳಿಸಿಕೊಂಡವನು. ಆದರೆ ಒಟ್ಟು ಮನಷ್ಯ ಜೀವನದಿಂದ ಹೊರಗಲ್ಲ. ಅವನ ಪರಿಷ್ಕೃತತೆ ಒಂದು ಹೈಲೈಟ್ ಅಥವ ಪ್ರತ್ಯೇಕವಾಗಿ ರೂಪಿಸಿಕೊಂಡ ಒಂದು ಜೀವನ ಮಾದರಿ. ಇಂಥ ಅನೇಕ ಜೀವನ ಮಾದರಿಗಳು ಜನಜೀವನದಲ್ಲಿ ಇವೆ. ಅವುಗಳಲ್ಲಿ ಬ್ರಾಹ್ಮಣ ಜೀವನ ಮಾದರಿಯೂ ಒಂದು. ಅದು ಯಾವ ಕಾರಣಕ್ಕೆ ಭಿನ್ನವಾಗಿದ್ದರೂ ಒಟ್ಟು ಸಂಸ್ಕೃತಿಯಲ್ಲಿ ಭಾಗವಹಿಸುವ ಮೂಲಕವೇ ತನ್ನ ಅಸ್ತಿತ್ವವನ್ನು ಕಾಯ್ದುಕೊಳ್ಳಬೇಕಿದೆ. ಅದಕ್ಕಾಗಿ ಆತ ಶಿಷ್ಟನಾಗಿ ಬೇರೆಯಾದರೂ ಒಟ್ಟು ಜೀವನಕ್ಕಾಗಿ ಅಂದರೆ, ಜನಪದ ಜೀವನಕ್ಕಾಗಿ ಜನಪದ ಸಂಸ್ಕೃತಿಯೊಳಗೆ ಸೇರಿಕೊಳ್ಳುವುದು ಹೀಗೆ :

ಸ್ತ್ರೀಯರನ್ನೂ ಗೋವುಗಳನ್ನೂ
ಬ್ರಾಹ್ಮಣರನ್ನೂ – ಕೊಲ್ಲಬಾರದು

ಸ್ತ್ರೀ ಮತ್ತು ಗೋವು ಜನಪದ ಸಂಸ್ಕೃತಿಯ ಸೃಜನಮೂಲಗಳು. ಅವುಗಳಿಲ್ಲದೆ ಸಮಾಜ ಅಸ್ತಿತ್ವಕ್ಕೆ ಬರಲಾರದು. ಮೂಲ ಕುಟುಂಬ, ಪಶುಪಾಲನೆ ಮತ್ತು ಕೃಷಿ ಸಂಸ್ಕೃತಿಗಳು ಭದ್ರವಾಗಿ ನೆಲೆನಿಂತದ್ದು ಇಂಥ ಸೃಜನ ಮೂಲಗಳಿಂದ. ಹೆಣ್ಣು ಸುಖಕೊಡುತ್ತಾಳೆ, ಕೂಸು ಹೆರುತ್ತಾಳೆ, ಅದನ್ನು ಸಂಸ್ಕೃತಿ ಕ್ರಿಯೆಗೆ ಸರಿಯಾಗಿ ಬೆಳೆಸುತ್ತಾಳೆ, ಒಳಗೆ ಮತ್ತು ಹೊರಗೆ ದುಡಿಯುತ್ತಾಳೆ. ಹಸು ಕರುಹಾಕುತ್ತದೆ, ಹಾಲು ಕೊಡುತ್ತದೆ, ಗೊಬ್ಬರ ಕೊಡುತ್ತದೆ, ಶ್ರಮ ನೀಡುತ್ತದೆ ಮತ್ತು ಆಹಾರ ಕೂಡ ಆಗುತ್ತದೆ.

ಈ ಎರಡೂ ಬಹು ಉತ್ಪತ್ತಿಯ ಬಹು ಮೂಲಗಳ ಉತ್ಪಾದನಾ ಕ್ರಿಯೆಗಳು. ಈ ಹೊತ್ತಿನ ವಿವಿಧೋದ್ದೇಶದ ಅಣೆಕಟ್ಟುಗಳು ಇದ್ದ ಹಾಗೆ. ಆದ್ದರಿಂದ ಜನಪದ ಸಮಾಜದಲ್ಲಿ ಇವುಗಳನ್ನು ಸೃಜನಮೂಲ ಅಥವ ಸೃಜನ ಪಾವಿತ್ರ್ಯಗಳೆಂದು ಕರೆಯಬಹುದು.

ಆದರೆ, ಬ್ರಾಹ್ಮಣನು ಈ ಮೂಲಗಳ ಜೊತೆಗೆ ತನ್ನನ್ನು ಸೇರಿಸಿಕೊಂಡದ್ದು ಅಥವ ಸಮಾಜ ಸೇರಿಸಿದ್ದು ಯಾಕೆ ? ಒಂದು ಕಾರಣ ; ಅವನು ಹೆಚ್ಚಿನ ಜ್ಞಾನವನ್ನು ಸಂಪಾದಿಸಿಕೊಂಡು ಗುರುವಿನ ಸ್ಥಾನವನ್ನು ಪಡೆದುಕೊಂಡಿದ್ದಿರಬಹುದು. ಬೆಳೆಯುತ್ತಿರುವ ಸಮಾಜಕ್ಕೆ ಗುರುವೊಬ್ಬನ ಅವಶ್ಯಕತೆ ಇದ್ದು ಅವನನ್ನು ಸೇರಿಸಿಕೊಂಡಿರಬಹುದು. ಆದ್ದರಿಂದ ಆತ ಸಾಮಾಜಿಕ ಅವಶ್ಯಕತೆಗಳಲ್ಲಿ ಒಂದಾಗಿ ಪರಿಣಮಿಸಿದ. ಎರಡನೆಯ ಕಾರಣ ; ಸಮಾಜವೊಂದು ಹದಗೆಡುತ್ತಿದ್ದ ಸಂದರ್ಭದಲ್ಲಿ ಪೂಜೆಯ ಅವಶ್ಯಕತೆ ಬಂದಿರಬಹುದು. ಬ್ರಾಹ್ಮಣ ಅಂಥ ಪೂಜೆಗೆ ಬೇಕಾದ ಅರ್ಹತೆಯನ್ನು ಪಡೆದುಕೊಂಡ ಕಾರಣಕ್ಕೆ ಪೂಜಾರಿಯಾಗಿ ಒಪ್ಪಿತವಾಗಿರಬಹುದು. ಇದೂ ಕೂಡ ಆ ಕಾಲದ ಸಮಾಜವೊಂದರ ಸಾಮಾಜಿಕ ಅವಶ್ಯಕತೆಯಾಗಿದ್ದಿರಬೇಕು. ಆದ ಕಾರಣ ಆತ ಗುರು ಮತ್ತು ಪೂಜ್ಯ ಆಗಿ ಸಾಮಾಜಿಕ ಮೂಲ (ಅವಶ್ಯಕತೆ) ಆಗಿದ್ದಿರಬಹುದು. ಆದರೆ ಆತ ಸ್ತ್ರೀ ಮತ್ತು ಗೋವುಗಳ ರೀತಿಯಲ್ಲಿ ಸೃಜನಮೂಲ ಅಥವ ಸೃಜನಪಾವಿತ್ರ್ಯವಲ್ಲ; ಅಂದರೆ, ಬೇಸಿಕ್ ನೀಡ್ ಅಲ್ಲ, ಎರಡನೆಯ ಅವಶ್ಯಕತೆ. ಈ ದೃಷ್ಟಿಯಿಂದ ಆತ ಅಗತ್ಯ. ಇದೇ ಮನುಷ್ಯ ಜಾತಿಯ ಕಾರಣಕ್ಕೆ ರಕ್ಷಿತ ಮತ್ತು ಒಳ್ಳೆಯ ಟ್ರೀಟ್‌ಮೆಂಟ್ ಪಡೆಯಬೇಕೆಂಬ ಹುನ್ನಾರದಿಂದ ಸೇರಿಕೊಂಡಿದ್ದರೆ ಆತ ದುಷ್ಟನೆ ಸರಿ.

ಶಿಷ್ಟ ಸಂಸ್ಕೃತಿಯಲ್ಲಿ ಹೆಣ್ಣು ಮತ್ತು ಗೋವುಗಳು ಕ್ಷೇತ್ರಗಳಾಗುತ್ತವೆ. ಗಂಡು, ಅದರಲ್ಲೂ, ಮೇಲು ಜಾತಿ, 'ವರ್ಗದ ಗಂಡು ಆ ಕ್ಷೇತ್ರವನ್ನು ಮೇಯುವ' ಹಾರುವ ಗೂಳಿಗಳಾಗುತ್ತಾರೆ. ಈ ದೃಷ್ಟಿಯಿಂದ ವಸ್ತು

ಸ್ವೀಕಾರ ಮತ್ತು ನಿರ್ವಹಣೆಯ ಮೂಲದಲ್ಲೆ ಜನಪದ ಮತ್ತು ಶಿಷ್ಟ ಸಂಸ್ಕೃತಿಗಳು ಭಿನ್ನವಾಗಿ ನಿಲ್ಲುತ್ತವೆ. ಶಿಷ್ಟಸಂಸ್ಕೃತಿ ಪರ್ಮನೆಂಟ್ ಅಲ್ಲವಾದ್ದರಿಂದ ಮತ್ತು ಅದರ ಬದುಕುವ ಸಂಪನ್ಮೂಲ ಜನಪದ ಸಂಸ್ಕೃತಿಯಲ್ಲೆ ಇರುವುದರಿಂದ ಅದು ಜನಪದ ಸಂಸ್ಕೃತಿಯೊಳಕ್ಕೆ ಬಂದು ತನ್ನ ಜೀವನ ಸತ್ವವನ್ನು ತುಂಬಿಕೊಳ್ಳುತ್ತದೆ.

## 2 ಮತ್ತೊಬ್ಬ 'ವೀರ್ಯ ಪುರುಷ'

ಜನಪದ ಸಂಸ್ಕೃತಿಯನ್ನು ಸಾಮಾನ್ಯ ಸ್ವೀಕರಿಸಿದರೆ, ಯಜಮಾನ ಅದನ್ನು ನಿರಾಕರಿಸುವ ಪರಿಸ್ಥಿತಿ ಮತ್ತು ಸ್ಥಿತಿಗೆ ಸಂಬಂಧಿಸಿದ ಕ್ರಿಯೆ.

ಸಂಸ್ಕೃತಿಯೊಂದರೊಳಗೆ 'ವೀರ' ಬೆಳೆಯುವುದು ಬೇರೆ, 'ವೀರ್ಯ ಪುರುಷ' ಬೆಳೆಯುವುದು ಬೇರೆ. ಜನಪದ ಸಂಸ್ಕೃತಿಯೊಳಗಿಂದ ಜನಪದ ನಾಯಕ ಬೆಳೆಯುತ್ತಾನೆ. ಸಮಕಾಲೀನ ಕೊರತೆಯನ್ನು ಗಮನಿಸಿ ಅದನ್ನು ತುಂಬಿಕೊಳ್ಳಲು ಜನಪದವು ತನ್ನ ಅವಶ್ಯಕತೆಯ ನಾಯಕನನ್ನು ಸೃಷ್ಟಿಸಿ ಕೊಳ್ಳುತ್ತದೆ. ವೀರ್ಯಪುರುಷ ಎನ್ನುವವನು ಜನಪದದೊಳಗಿನ ಸುಖಗಳನ್ನು ತನಗಾಗಿ ಹೆಕ್ಕಿಕೊಳ್ಳುವ ತೆವಲುಗಾರ. ಜನಪದದೊಳಗಿಂದ ಹುಟ್ಟಿ ಬಂದರೂ ಇವನು ಜನಪದದ ಸವಲತ್ತುಗಳನ್ನು ತನಗಾಗಿ ಕೇಂದ್ರೀಕರಿಸಿಕೊಂಡು ಕಾಯ್ದಿರಿಸಿಕೊಳ್ಳುತ್ತಾನೆ. ಈ ಸವಲತ್ತು ಎಂಬ ಬಂಡವಾಳವನ್ನು ಬಳಸಿಕೊಂಡು ಎಲ್ಲರ ಮೇಲೆ ಮೆರೆಯುತ್ತಾನೆ. ತನಗೆ ಎದುರಾದವರನ್ನು ಕೊನೆಗಾಣಿಸುತ್ತಾನೆ. ಸಾಮಾನ್ಯರು, ಬಡವರು, ಪ್ರಕೃತಿ ಮತ್ತು ಸ್ತ್ರೀಯರು ಇವನ ಆಟಕ್ಕೆ ನಲುಗುತ್ತಾರೆ.

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನಿಂದ 'ಗೇರ್ಕಳ್ಳ' ಎಂಬ ಜನಪದ ಕುಣಿತ ಇರುವುದನ್ನು ಜಾನಪದ ಕ್ಷೇತ್ರ ಕಾರ್ಯಕರ್ತರು ವರದಿ ಮಾಡುತ್ತಾರೆ. ಗೇರ್ಕಳ್ಳ ಎಂಬುದು ಚಿರತೆಯ ಥರದ ಚಿಕ್ಕ ಪ್ರಾಣಿ, ಅಥವ ಚಿರತೆಯ ಒಂದು ಪ್ರಭೇದ ಇರಬಹುದು. ಈ ಚಿರತೆಯ ವೇಷಧಾರಿಯೆ 'ಗೇರ್ಕಳ್ಳ'. ಯಾಕೆ ಈ ವೇಷ ? ಅದು ಕಾಡು–ನಾಡಿನ

ಮಧ್ಯದ ಗಡಿ ಪ್ರದೇಶ. ಕಾಡಿನಲ್ಲಿ ಚಿರತೆ ಥರ ಅನೇಕ ಪ್ರಾಣಿಗಳಿವೆ. ಕಾಡಿನಲ್ಲಿ ಆಹಾರದ ಕೊರತೆ ಬಿದ್ದಾಗ ನಾಡಿನ ಕಡೆ ತಲೆಹಾಕುತ್ತವೆ. ಅದೇ ಗಡಿಯ ಮತ್ತೊಂದು ಭಾಗದಲ್ಲಿ ಕೂಲಿಮಾಡಿ ಬದುಕುವ ಜನ ಇದ್ದಾರೆ. ಜೊತೆಯಲ್ಲಿ ಉಪ ಆದಾಯಕ್ಕಾಗಿ ಒಂದೊಂದು ಆಡುಕುರಿಗಳನ್ನು ಸಾಕುತ್ತಾರೆ. ಅವರು ದೊಡ್ಡ ಪಶುಪಾಲಕರಲ್ಲ. ಇವರ ಆಡು–ಕುರಿಗಳನ್ನು ಒಮ್ಮೊಮ್ಮೆ ಚಿರತೆಯು ಕದ್ದು ಹಿಡಿದು ತಿನ್ನುವುದುಂಟು.. ಈ ಚಿರತೆಯನ್ನು ನಾಡ ಬಡಜನ ಕೊಲ್ಲಲಾರರು. ಕಾಡಿನ ಜೊತೆಗೆ ಇರುವ ಇವರಿಗೆ ಕಾಡು ಪ್ರಾಣಿಗಳು ಅನ್ಯವಲ್ಲ. ಅವುಗಳ ಕಾಡಿನಲ್ಲಿ ಅವು, ಇವರ ನಾಡಿನಲ್ಲಿ ಇವರು ತಮ್ಮ ಪಾಡಿಗೆ ತಾವು ಬದುಕುವುದು ಸಾಮಾನ್ಯ. ಚಿರತೆ ಈ ನಾಡಿಗರು ಸಾಕಿದ ಪ್ರಾಣಿಯನ್ನು ತಿಂದಾಗ ಬೇಸರ, ಸಿಟ್ಟು ಬರುವುದು ಸಾಮಾನ್ಯ. ಆದರೆ ಚಿರತೆಯನ್ನು ಕೊಲ್ಲುವುದು ಸುಲಭವಲ್ಲ.

ಆದ್ದರಿಂದಲೇ ಚಿರತೆಯ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಲು ಆ ನಾಡಿನ ಬಡವರು ಚಿರತೆ ವೇಷ ಕಟ್ಟುತ್ತಾರೆ. ಯುವಕನೊಬ್ಬನ ತಲೆಗೆ ಬಟ್ಟೆ, ಮೈಗೆ ಬಣ್ಣ, ಸೊಂಟಕ್ಕೆ ಹಗ್ಗ ಕಟ್ಟುತ್ತಾರೆ. ಆತ ಚಿರತೆಯಂತೆ ಆ ಕಡೆ ಈ ಕಡೆ ನುಗ್ಗಿದಂತೆ, ತಪ್ಪಿಸಿಕೊಂಡಂತೆ ನಟಿಸುತ್ತಾನೆ. ಅವನ ಸೊಂಟದ ಹಗ್ಗಕ್ಕೆ ಮೂರು ಕಡೆಯಿಂದ ಹಗ್ಗ ಹಾಕಿ ಮೂರು ಕಡೆ ಯುವಕರು ಹಿಡಿದಿರುತ್ತಾರೆ. ಆತ ಜಗ್ಗಿದಂತೆ ಜಗ್ಗುತ್ತ, ತಾವು ಅವನನ್ನು ಜಗ್ಗಿ ಎಳೆದಂತೆ ಮಾಡುತ್ತ, ಅದಕ್ಕೆ ಎಚ್ಚರಿಕೆಕೊಟ್ಟಂತೆ ಮಾಡುತ್ತ ಕುಣಿತ ನಡೆಯುತ್ತದೆ. ಕೊನೆಗೊಮ್ಮೆ ಹಗ್ಗ ಹಿಡಿದವರು ಅದನ್ನು ಬಿಟ್ಟಂತೆ, ವೇಷದ ಚಿರತೆ ತಪ್ಪಿಸಿಕೊಂಡಂತೆ ನಟಿಸಿ ಕುಣಿತವನ್ನು ಮುಗಿಸಲಾಗುತ್ತದೆ. ಅಂದರೆ ಚಿರತೆಯನ್ನು ಅವರು ಕೊಲ್ಲಲಿಲ್ಲ, ಅದನ್ನು ಹೆದರಿಸಿ ಓಡಿಸಿದರು ಅಷ್ಟೆ. ಇದು ಯಾಕೆ ?

ಇಂಥ ಕುಣಿತಗಳು ಜಗತ್ತಿನ ಅನೇಕ ಕಾಡು–ನಾಡು ವಾಸಿಗಳ

ಮಧ್ಯೆ ಇವೆ. ಆಂಧ್ರದ ಬುಡಕಟ್ಟು ಜನರು ಕಾಡಿನ ಗಡಿಯಲ್ಲಿ ನಿಂತು ದಿನ ಪೂರ್ತಿ ತಮಟೆ ಬಡಿದು ಕಾಡು ಪ್ರಾಣಿಗಳು ತಮ್ಮ ಬೆಳೆ ತಿನ್ನದಂತೆ ಹೆದರಿಸಿ ಎಚ್ಚರಿಸುತ್ತಾರೆ. ಮಧ್ಯ ಪ್ರದೇಶದಲ್ಲಿ ಬೆಳೆದ ಕಾಳು ತಿನ್ನುವ ಕಾಗೆಯನ್ನು ಓಡಿಸಲು ಕಾಗೆ ನೃತ್ಯ ನಡೆಸಲಾಗುತ್ತದೆ. ಇದರ ಉದ್ದೇಶವೆಂದರೆ : ಸಂರಕ್ಷಣಾ ಆರ್ಥಿಕ ಚಟುವಟಿಕೆ .

1) ಕಾಡು–ನಾಡುವಾಸಿಗಳು ತಮ್ಮ ತಮ್ಮ ಕರುಗಳನ್ನು ರಕ್ಷಿಸಿಕೊಳ್ಳಲು ಕಾಡಿನ ಚಿರತೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳುವುದು.

2) ನೀನು ನಮ್ಮ ಅಲ್ಪ ಸಂಪತ್ತನ್ನು ತಿನ್ನಬೇಡ, ನಾವು ನಿನ್ನನ್ನು ಕೊಲ್ಲುವುದಿಲ್ಲ ಎಂಬ ಒಪ್ಪಂದ.

3) ಜೀವ ರಕ್ಷಣೆ ಮತ್ತು ಭಯ ಹುಟ್ಟಿಸುವುದು, ಕೊಲ್ಲುವುದಿಲ್ಲ.

4) ಅಥವಾ ಕಾಡು ಪ್ರಾಣಿಯನ್ನೆ ತಮ್ಮ ರಕ್ಷಕ ದೇವತೆಯನ್ನಾಗಿ ಮಾಡಿಕೊಳ್ಳುವುದು.

ಇದು ಕಾಡು, ಕಾಡು ಪ್ರಾಣಿಗಳು ಬೇಡವಾದುವು ಅಥವ ನಾಶ ಮಾಡುವವುಗಳಲ್ಲ, ನಮ್ಮಂತೆ ಅವುಗಳಿಗೂ ಜೀವ–ಅಸ್ತಿತ್ವ ಇದೆ ಎಂದು ತಿಳಿಯುವುದು. ಈ ತಿಳಿವಿಗೆ ಓದು, ಡಾಕ್ಟರೇಟ್ ಬೇಕಾಗಿಲ್ಲ. ಪರಿಸರ ಸ್ಪಂದನವೆ ಅದನ್ನು ಕಲಿಸುತ್ತದೆ. ಈ ಕಾರಣಕ್ಕಾಗಿಯೆ ಈ ಹೊತ್ತೂ ಕೆಲವರ್ಗದ ಪರಿಸರ ಚಿಂತಕರು ಬುಡಕಟ್ಟು ಜನರನ್ನು ಕಾಡಿನಿಂದ ಒಕ್ಕಲೆಬ್ಬಿಸಬೇಡಿ, ಅವರು ಅಲ್ಲಿಯ ಜೀವ ಸಂಕುಲಗಳನ್ನು ರಕ್ಷಿಸುತ್ತಾರೆ ಮತ್ತು ಹೊರಗಿನ ಕಾಡುಗಳ್ಳರಿಂದ ಕಾಡನ್ನು ರಕ್ಷಿಸುತ್ತಾರೆ ಎಂದು ಹೇಳುತ್ತಾರೆ. ಕಾಡಿನ ಜೊತೆಗೆ ಇರುವ ಜನರು ನಿಜವಾಗಿ ಒಳಗಿನವರು, 'ಕೂಡಿಕೊಳ್ಳುವವರು'. ಹೊರಗಿನವರು 'ದೂರದವರು' ಮತ್ತು ಶೋಷಕರು.

ಗೇರ್ಕಳ್ಳ ಕುಣಿತ ನಡೆಸುವವರು ಬಡ ಕೂಲಿಗಳು. ಅವರು ಕೂಲಿಮಾಡುವುದು ಅಲ್ಲೆ ನೆಲೆಸಿರುವ ಭೂಮಾಲೀಕನಲ್ಲಿ. ಅವರು

ಭೂಮಾಲೀಕನಲ್ಲಿ ಕಷ್ಟ–ನಷ್ಟ ಅನುಭವಿಸುತ್ತಾರೆ. ಅವನ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳಲು ಹೋಗುವುದಿಲ್ಲ. ಅದು ಸಾಧ್ಯವಿಲ್ಲ ಎಂದು ಅವರಿಗೆ ಗೊತ್ತು. ಅವನು ನೆಲೆನಿಂತಿರುವುದೇ ಕಾಡು–ನಾಡಿನ ಸೃಜನ ಮೂಲಗಳನ್ನು ಶೋಷಿಸುವುದರಿಂದ. ಆತ ಕೂಡ ಈ ಕೂಲಿಗಳ ಜೊತೆಗೆ ಒಪ್ಪಂದ ಮಾಡಿಕೊಳ್ಳುವುದಿಲ್ಲ. ಆ ಬಡವರ ಕರುವನ್ನು ತಿಂದ ಚಿರತೆ ಇವನ ಮನೆ ಕಡೆ ಬಂದರೆ ಅದು ಬಂದೂಕಿನ ಗುಂಡಿಗೆ ಢಮಾರ್ ಆಗಿಹೋಗುತ್ತದೆ. ಸಾಮಾನ್ಯರ ಜೊತೆಗೆ ಅವನ ಹೊಂದಾಣಿಕೆ ಇಲ್ಲವೇ ಇಲ್ಲ. ಅವನು ಅವನ ವೀರ್ಯಶಕ್ತಿಗೆ ಮಾತ್ರ ಬೆಲೆಕೊಡುವವನು. ಇವನ ಪ್ರದರ್ಶನವೆಲ್ಲ ಯಜಮಾನಿಕೆ. ಇವನ ಸಂಸ್ಕೃತಿ ಮೊತ್ತದ ಸಂಸ್ಕೃತಿ. ಗೇರ್ಕಳ್ಳ ನೃತ್ಯ ಸೃಷ್ಟಿಸಿರುವವರು ಸಾಮಾನ್ಯರು, ಅವರದು ಜನಪದ ಸಂಸ್ಕೃತಿ.

## 3 ಹಿಟ್ಟೆತ್ತುವ ದೇವರು.

ನಮ್ಮ ಕಡೆ 'ಹಿಟ್ಟೆತ್ತು' ಎಂದರೆ ಭಿಕ್ಷೆ ಬೇಡು, ತಿರುಪೆ ಮಾಡಿ ಜೀವನ ಹಾಕು ಎಂದು ಅರ್ಥ. ಕೈಲಾಗದವರು, ಸೋಂಬೇರಿಗಳು, ಶಕ್ತಿ ಇಲ್ಲದವರು ಹೀಗೆ ಮಾಡುತ್ತಾರೆ. ಕೈಲಾದರೂ ಕೆಲಸ ಮಾಡದೆ ಅವರಿವರ ಮನೆಯಲ್ಲಿ ಅಡುಗೆಯಾದುದನ್ನು ಕಂಡು, ಅಲ್ಲಿ ಹೋಗಿ ಅಂಡೂರುವವನನ್ನು 'ತಳಿಗೆ' ಎಂದು ಕರೆಯುತ್ತಾರೆ. ಇದು ಮನುಷ್ಯರ ಮಧ್ಯದ ಕ್ರಿಯೆ.

'ಹಿಟ್ಟೆತ್ತು' ಮತ್ತು 'ತಳಿಗೆ' ಎತ್ತುವ ಕೆಲಸವನ್ನು ನಮ್ಮ ಕಡೆ ದೇವರುಗಳೆ ಮಾಡುತ್ತವೆ. ಇವು ಗ್ರಾಮದೇವತೆ ಮತ್ತು ಅವುಗಳ ಸೋಮಗಳು. ಈ ಸೋಮಗಳನ್ನು ಕೂಡ 'ಸೋಮನ ದೇವರು' ಎಂದೆ ಕರೆಯುತ್ತಾರೆ.

ಒಂದು ದಿನ ಇದ್ದಕ್ಕಿದ್ದಂತೆ ಯಾವುದೋ ಊರಿನ ವ್ಯಕ್ತಿಯೊಬ್ಬ ಹೆಗಲ ಮೇಲೆ ಸೋಮನ ದೇವರನ್ನು ಹೊತ್ತುಕೊಂಡು ನಮ್ಮ ಊರಿಗೆ ಬರುತ್ತಾನೆ. ಅವನನ್ನು ಕಂಡ ಕೂಡಲೆ ಹುಡುಗರಿಗೆ ಖುಷಿಯೋ ಖುಷಿ.

ಹಿಟ್ಟಿನ ಸೋಮ ಬಂತು, ಹಿಟ್ಟಿನ ಸೋಮ ಬಂತು ಎಂದು ಹುಡುಗರು ಕುಣಿದು ಕುಪ್ಪಳಿಸುತ್ತಾರೆ. ಕೂಡಲೆ ತಮ್ಮ ಮನೆಗೆ ಹೋಗಿ ಅಲ್ಲಿರುವ ಅವ್ವನಿಗೊ, ಅಪ್ಪನಿಗೊ ಸುದ್ದಿ ಮುಟ್ಟಿಸುತ್ತಾರೆ. ಅವರು ಕೂಡಲೆ ಹಿಟ್ಟಿನ ಸೋಮ ಬಂದು ಕುಳಿತಿರುವ ಅರಳಿಕಟ್ಟೆ ಅಥವ ಆ ಊರಿನ ದೇವಸ್ಥಾನಕ್ಕೆ ಧಾವಿಸುತ್ತಾರೆ. ಅದು ಯಾವ ಊರಿನ, ಯಾವ ದೇವರ ಹಿಟ್ಟಿನ ಸೋಮ ಎಂದು ಕೇಳಿ, ವಿಚಾರಿಸಿ ತಿಳಿದುಕೊಳ್ಳುತ್ತಾರೆ. ಅದು ತಮ್ಮ ಮನೆ ದೇವತೆಯ ಸೋಮನೆ ಆಗಿದ್ದರೆ ಬಹಳ ಭಯ-ಭಕ್ತಿಯಿಂದ ಮುಟ್ಟಿ ನಮಸ್ಕಾರ ಮಾಡಿ ತಮ್ಮ ಮನೆಗೆ ಬರುವಂತೆ ಆಹ್ವಾನಿಸುತ್ತಾರೆ. ಅದು ತಮ್ಮ ಮನೆದೇವರು ಅಲ್ಲದಿದ್ದರೆ ಅಂಥ ಮನೆಯವರಿಗೆ ಹೇಳಿಕಳಿಸಿ ತಿಳಿಸುತ್ತಾರೆ. ಕೊನೆಗೆ ಆ ದೇವರಿಗೆ ಒಕ್ಕಲಾದವರು ಮತ್ತು ಆಗದೆ ಇರುವ ಊರಿನವರೆಲ್ಲ ಸೇರಿ ನಮ್ಮೂರಿಗೆ ಇಂಥ ಊರಿನ, ದೇವತೆಯ ಹಿಟ್ಟಿನ ಸೋಮ ಬಂದಿದೆ ಎಂದು ಸಾರಿ ಸಾರಿ ಹೇಳುತ್ತಾರೆ.

ಊರಿಗೆ ಹಿಟ್ಟಿನ ಸೋಮ ಬಂದಿದೆ ಎಂದರೆ ನಾಳೆಯೋ ನಾಡಿದ್ದೋ ಆ ಸೋಮನಿಗೆ ಸೇರಿದ ದೇವತೆ ಊರಿಗೆ ಬರುತ್ತಾಳೆ. ಅವಳ ಹಿಂದೆ ದೇವರು ಹೊತ್ತವರು, ಸೋಮನನ್ನು ಕುಣಿಯುವವರು ಮತ್ತು ಸಹಾಯಕರು ಬರುವರು. ಅವರಿಗಾಗಿ ಮನೆಮನೆಯಲ್ಲಿ ಅಡಿಗೆ ಮಾಡಬೇಕು ಎಂಬುದೆ ಹಿಟ್ಟಿನ ಸೋಮನ ಆಗಮನದ ಉದ್ದೇಶ ಮತ್ತು ಸಂದೇಶ. ಇತ್ತೀಚಿನವರೆಗೆ ಸೀಮಿತ ನೀರಾವರಿ ಪ್ರದೇಶವನ್ನು ಬಿಟ್ಟರೆ ನಮ್ಮ ಕಡೆ ರಾಗಿ ಹಿಟ್ಟಿನಿಂದ ಮಾಡಿದ ಮುದ್ದೆ ಮತ್ತು ಅವರೆ, ತೊಗರಿ ಅಥವ ಹಲಸಂದೆ ಕಾಳಿನ ಸಾರು ಮುಖ್ಯ ಆಹಾರ. ಅನ್ನ ಅಪರೂಪ.

ತಳಿಗೆ ಎತ್ತುವುದು ಎಂದರೆ ಉತ್ಸವ ಮುಗಿದ ಮಾರನೆಯ ದಿನ ಗ್ರಾಮದೇವತೆ ಮನೆ ಮನೆಗೆ ಹೋಗಿ ನಿಂತು ಒಂದು ಹಿಡಿ ಅಕ್ಕಿ, ಹಣ್ಣು, ತೆಂಗಿನ ಕಾಯಿ ಮತ್ತು ಸೌಲಭ್ಯವಿರುವವರಿಂದ ಒಂದು ರವಿಕೆ ಕಣ ಮತ್ತು ಹಣ ಪಡೆಯುವುದು. ಅಥವ ಉತ್ಸವ ಮುಗಿದು, ದೇವರು

ಗುಡಿದುಂಬಿದ ಮೇಲೆ ರಾತ್ರಿಗೆ ತಯಾರಾದ ಬಾಡಿನ ಊಟದ ಮುಖ್ಯ ಭಾಗವನ್ನು ದೇವತೆಯ ಮೂಲಸ್ಥಾನಕ್ಕೆ ಒಪ್ಪಿಸಲಾಗುತ್ತದೆ. ಅನೇಕ ಮನೆಗಳಿಂದ ತಂದು ಒಂದೆ ಪಾತ್ರೆಯೊಳಗೆ ಹಾಕಿದ ಸಾರು ತುಂಬ ರುಚಿಯಾಗಿರುತ್ತದೆ. ಇದನ್ನು ಪೂಜಾರಿ ಸೇರಿದಂತೆ ದೇವತೆಯ ಸೇವಕರ ಮಧ್ಯೆ ಹಂಚಲಾಗುತ್ತದೆ. ಇಂಥ ರುಚಿಕಟ್ಟಾದ ಸಾರು ತಿಂದವರಿಗೆ ಹೆಂಡತಿ ಮಾಡಿದ ಸಾರು ರುಚಿಸುವುದಿಲ್ಲ. ಅಂಥವರು ಬೇರೆ ದಿನಗಳಲ್ಲಿ ಯಾರ ಮನೆಯಿಂದ ಸಾರಿನ ಸುಗಂಧ ಬರುತ್ತದೋ ಅಲ್ಲಿಗೆ ಧಾವಿಸುತ್ತಾರೆ. ಇಂಥವರನ್ನು 'ತಳಿಗೆ' ಅಥವ ಉದಕ ಎತ್ತುವವನು ಎಂದು ಕರೆಯುತ್ತಾರೆ.

ಗ್ರಾಮದೇವತೆ ತನ್ನ ಸೇವಕ ಸೋಮ (ಮುಖವಾಡ)ನ ಮೂಲಕ ಹಿಟ್ಟೆತ್ತುತ್ತಾಳೆ ಮತ್ತು ಭಕ್ತರಿಂದ ಹಣ ಸಂಗ್ರಹಿಸುತ್ತಾಳೆ. ದೇವತೆ ಮತ್ತು ಸೋಮ ಊರೂರಿಗೆ ಹಿಟ್ಟೆತ್ತಲು ಹೋಗುತ್ತಿದ್ದುದು ತನ್ನ ವಾರ್ಷಿಕ ಉತ್ಸವಕ್ಕೆ ಬೇಕಾದ ಹಣ ಮತ್ತು ದವಸವನ್ನು ಸಂಗ್ರಹಿಸಲು, ಆ ಮೂಲಕ ಸುತ್ತಣ ಹಳ್ಳಿಗಳನ್ನು ಕೂಡಿಸಿಕೊಳ್ಳುವುದು ಮುಖ್ಯ ಉದ್ದೇಶ. ತನ್ನ ಹಳ್ಳಿ ಮತ್ತು ಇತರೆ ತನ್ನ ಊರಿಗೆ ಪಂಚಾಯ್ತಿ ಸಂಬಂಧ ಇರುವ ಹಳ್ಳಿಗಳನ್ನು ಒಗ್ಗೂಡಿಸಲು. ಒಂದು ಹಳ್ಳಿ ಮತ್ತು ಅದರ ಸಂಬಂಧ ಹಳ್ಳಿಗಳ ಮಧ್ಯೆ ಒಗ್ಗಟ್ಟು ಮೂಡಿಸುವುದು (Integrity) ಇಲ್ಲಿಯ ಆಶಯ. ಈ ದೃಷ್ಟಿಯಿಂದ ಹಳ್ಳಿಗಳಲ್ಲಿ ಇಂಟೆಗ್ರಿಟಿ ಇತ್ತು. ಅಲ್ಲಿ ಎಲ್ಲರಿಗೂ ಉದ್ಯೋಗ ಇತ್ತು. ಆದರೆ ಜಾತಿ-ಜಾತಿಗಳ ಮಧ್ಯೆ ಸಮಾನತೆ ಇತ್ತು ಎಂಬುದು ಇದರ ಅರ್ಥವಲ್ಲ. ಸಾಂಪ್ರದಾಯಿಕ ಅಸಮಾನತೆಯನ್ನು ಒಪ್ಪಿಕೊಂಡ, ಅಂಥ ಅಸಮಾನತೆಗೆ ಸಮರ್ಪಿಸಿಕೊಂಡ ಮನೋಧರ್ಮದಿಂದಾಗಿ ಹಳ್ಳಿಗಳಲ್ಲಿ ಏಕತೆ ಇತ್ತು. ಹಾಗೆಯೆ ಉತ್ಸವದ ಪ್ರದರ್ಶನದಲ್ಲಿ ಬಹುತ್ವದಲ್ಲಿ ಏಕತೆ ಎಂಬ ಹೊಂದಾಣಿಕೆ ಇತ್ತು. ಹಳ್ಳಿಗಳಲ್ಲಿ ಧರ್ಮ ಸಂಘರ್ಷವಿರಲಿಲ್ಲ. ಭಿನ್ನಮತಧರ್ಮಗಳ ಸಾಮಾನ್ಯ-ಸಾಮೂಹಿಕ ಒಂದಾಣಿಕೆ ಇತ್ತು. ಅದು ಜನಪದ ಸಂಸ್ಕೃತಿ.

ಗ್ರಾಮದೇವತೆಯ ಉತ್ಸವದ ಸಂದರ್ಭದಿಂದ ಇದನ್ನು ಸ್ಪಷ್ಟಪಡಿಸಿಕೊಳ್ಳಬಹುದು. ಉತ್ಸವದಲ್ಲಿ

1. ಗ್ರಾಮದೇವತೆ – ಮಾತೃ ಸಂಸ್ಕೃತಿಯ ಪ್ರತೀಕ.
2. ಗಾರುಡಿಗ – ಮಾಂತ್ರಿಕ ಸಂಸ್ಕೃತಿ/ಧರ್ಮದ –
3. ಕರಿಸೋಮ – ನೆಲಮೂಲ ಸಂಸ್ಕೃತಿಯ/ –
4. ವಿಭೂತಿ ಸೋಮ – ಶೈವ ಸಂಸ್ಕೃತಿಯ/ –
5. ಮೂರು ನಾಮದ ಸೋಮ – ಶ್ರೀವೈಷ್ಣವ ಸಂಸ್ಕೃತಿ/–

ಇವು ಒಟ್ಟಿಗೆ ಕುಣಿಯುತ್ತವೆ, ಖುಷಿಪಡುತ್ತವೆ, ಸಂಭ್ರಮಿಸುತ್ತವೆ. ಆಹಾರ, ನಂಬಿಕೆಯಲ್ಲಿ ಭಿನ್ನತೆ ಇದ್ದರೂ ಒಡೆದುಕೊಳ್ಳುವುದಿಲ್ಲ. ಬಂದ ಪ್ರವಾಹವನ್ನೆಲ್ಲ ಸೇರಿಸಿಕೊಂಡು, ಸಹಿಸಿಕೊಂಡು ಜೀವನ ನಿರಂತರತೆಯನ್ನು (ಸಮುದ್ರದಂತೆ?) ಕಾಪಾಡಿಕೊಳ್ಳುವುದೆ ಜನಪದ ಸಂಸ್ಕೃತಿಯ ಸ್ವಭಾವ.

ಈ ಉತ್ಸವದ ಹಿಂದಿನ ಆಚರಣೆಯನ್ನು ಗಮನಿಸಿ. ಅಲ್ಲಿ ಸಸ್ಯಾಹಾರಿ ದೇವರಿಗಾಗಿ, 'ಸಿಹಿದಿನ' ಮತ್ತು ಮಾಂಸಾಹಾರಿ ದೇವರಿಗಾಗಿ 'ಕಾರಾದಿನ' ಎಂಬ ಅಡುಗೆ – ಪೂಜೆ ಆಚರಣೆಗಳಿವೆ. ಅಂದರೆ ಆ ಎರಡೂ ಭಿನ್ನ ಧೋರಣೆಗಳನ್ನು ಕೂಡಿಸಿಕೊಂಡೆ ಹಬ್ಬ ನಡೆಯುತ್ತದೆ. ಇದರ ಅರ್ಥ ಜನಪದ ಸಂಸ್ಕೃತಿ ಕೂಡಿಸಿಕೊಳ್ಳುತ್ತದೆಯೆ ವಿನಃ ಕಳೆಯುವುದಿಲ್ಲ.

## 4 ಅಪರಾಧಿ ನಾನಲ್ಲ !

ಅಪರಾಧಿಯನ್ನು ಫಿಕ್ಸ್ ಮಾಡುವವರು ಯಾರು, ಅಪರಾಧಿ ಯಾರು? ಅಪರಾಧ ಯಾವುದು? ಬಡವ ನೀನು ಮಡಗಿದಂತೆ ಇರು ಎಂದರೆ ಅವನು ಹಾಗೆ ಯಾಕೆ ಇರಬೇಕು, ಅವನು ಮಾಡಿದ ಅಪರಾಧವೇನು ? ಬಡವನ ಸೊಸೆ ಊರಿಗೆಲ್ಲ ಹೆಂಡತಿ ಎಂದರೆ ಅವಳು ಊರಿಗೆಲ್ಲ ಯಾಕೆ ಹೆಂಡತಿಯಾಗಬೇಕು, ಅವಳು ಅಂಥ ಅಪರಾಧವನ್ನು ಏನು ಮಾಡಿದಳು? ಅಪರಾಧಿ ಅಥವ ಪಿರ್ಯಾಧಿಯನ್ನು

ನಿರ್ಧರಿಸುವುದು ಅಷ್ಟು ಸುಲಭವಲ್ಲ. ಪಿರ್ಯಾಧಿಯೆ ಅಪರಾಧಿಯ ಸ್ಥಾನದಲ್ಲಿ ನಿಲ್ಲಬಹುದು. ಈ ಎರಡೂ ಕೂಡ ಒಂದು ಶಿಷ್ಟ ಸಮಾಜದಲ್ಲಿ ಕ್ಯಾಪಿಟಲ್ ವ್ಯಾಲ್ಯು. ಮನುಧರ್ಮಶಾಸ್ತ್ರವನ್ನು ಓದಿ. ಅವನು ಯಾರು ಯಾರನ್ನು ಮತ್ತು ಯಾಕೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಾನೆ ನೋಡಿ, ಭಯವಾಗುತ್ತದೆ. ಕೆಲವರು ಈ ಭೂಮಿಯ ಮೇಲೆ ಹುಟ್ಟುವುದೆ ಅಪರಾಧ ಅನ್ನಿಸುತ್ತದೆ. ಅದೇ ಮನುಧರ್ಮಶಾಸ್ತ್ರವನ್ನು ತಿರುಗಿಸಿ ಓದಿ; ಎಂಥ ಅಪರಾಧಿಯಿಂದ ಸಮಾಜಕ್ಕೆ ಎಂಥ ಮಹಾ ಅಪರಾದವಾಗಿದೆ ಎಂದು ತಿಳಿಯುತ್ತದೆ. ಯಜಮಾನರೆ ಹಾಗೆ !!

ಜನಪದ ಸಂಸ್ಕೃತಿಯ ಮೂಲಕ ಜನರನ್ನು ಓದಿ, ಜಾತಿಯನ್ನು ಓದಬೇಡಿ. ನೋಡಿ :

ಹಾರ್ವ ದುಡಿಯೋದು ಪಿಂಡ್ಕೆ
ಒಕ್ಕಲಿಗ ದುಡಿಯೋದು ದಂಡ್ಕೆ.
ಹೊಲಯ ದುಡಿಯೋದು ಹೆಂಡ್ಕೆ.

ಇಲ್ಲಿ ಯಾರು ಅಪರಾಧಿಗಳು? ಎಲ್ಲರೂ. ಜಾತಿಯ ಕಾರಣವನ್ನು ಇಲ್ಲಿ ತಿರಸ್ಕರಿಸಲಾಗಿದೆ, ಮನಷ್ಯ ಕಾರ್ಯವನ್ನು ಗೌರವಿಸಲಾಗಿದೆ. ಹಾರ್ವ=ಒಕ್ಕಲಿಗ=ಹೊಲಯ ಒಂದೇ ಪಾತಳಿಯಲ್ಲಿ ಇದ್ದಾರೆ. ಹೊಲೆಯ ಮಾತ್ರ ಅಪರಾಧವನ್ನು ಮಾಡುವುದಿಲ್ಲ. ಆರ್ಥಿಕ ಸಂಪತ್ತಿನ ಅಹಂಕಾರಕ್ಕೆ ಒಕ್ಕಲಿಗ ಬಲಿಯಾಗಿದ್ದಾನೆ. ಎಲ್ಲರೂ ತಮ್ಮದೇ ಕಾರಣಕ್ಕೆ ಬಲಿಪಶುಗಳು. ಅಂದರೆ ಅಪರಾಧ ವ್ಯಕ್ತಿಯ ಹೊರಗೆ ಮತ್ತು ಸಮಾಜದ ಹೊರಗೆ ಘಟಿಸುವುದಿಲ್ಲ. ಅದು ಅವರ ನಡವಳಿಕೆ (ಕ್ರಿಯೆ=ಸಂಸ್ಕೃತಿ)ಯಲ್ಲೆ ಹುಟ್ಟುವಂಥದು. ಜನಪದ ಸಂಸ್ಕೃತಿ ವ್ಯಕ್ತಿ ಮತ್ತು ಸಮಾಜವನ್ನು ನೋಡುವುದು ಹೀಗೆ. ಎಲ್ಲರೂ ಕೂಡಿ ಬಾಳುವ ಹಾಗೆ; ಕೂಡಿಯೆ ಚಿಂತಿಸುವುದು ಕೂಡಿಯೆ ವಿಮರ್ಶಿಸಿಕೊಳ್ಳುವ ಹಾಗೆ.

**5 ದೇಹವೆ ದೇಗುಲ**

ಖಂಡ ಇದ್ರೆ ನನ್ನ ಗಂಡ ಇದ್ದಂಗೆ
ಮೀನು ಇದ್ರೆ ನನ್ನ ಮಿಂಡ ಇದ್ದಂಗೆ
ಬಾಡು ಇದ್ರೆ ನನ್ನ ಬಳಗ ಇದ್ದಂಗೆ

ಇವಳು ಶುದ್ಧ ಚಾರ್ವಾಕಳೆ ಇರಬೇಕು ಎಂದು ನಿಮಗೆ ಅನಿಸುತ್ತದೆ. ಎರಡನೆಯ ಸಾಲು ಓದಿ ಆಕೆಯನ್ನು ನಿರಾಕರಿಸಲೂ ಬಹುದು. ನಿಮ್ಮ ಸ್ಥಿತಿಯಲ್ಲಿ ಓದಿದಾಗ ನಿಮಗೆ ಹಾಗೆನಿಸುತ್ತದೆ. ಯಾಕೆಂದರೆ ನೀವು ಒಂದು ಸಾಮಾಜಿಕ ಸ್ಥಿತಿಗೆ ಬದ್ಧರಾಗಿದ್ದೀರಿ ಅಥವ ಒಪ್ಪಿಸಿಕೊಂಡಿದ್ದೀರಿ ಎನ್ನುವುದು ಸರಿ. ನಮ್ಮ ಬಹುತೇಕ ತೀರ್ಮಾನಗಳು ಇಂಥ ಸ್ಥಿತಿಗೆ ಒಪ್ಪಿಸಿಕೊಂಡುದರಿಂದ ಉಂಟಾಗುತ್ತವೆ. ಬಹುತೇಕರು ತಮ್ಮ ಸಿದ್ಧ ಮನಸ್ಸಿನ ಮೂಲಕವೆ ಎಲ್ಲವನ್ನೂ ಅಳೆಯುತ್ತಾರೆ. ಅವರ ಸಿದ್ಧ ಮನಸ್ಸು ಒಂದು ಕಾಲದ, ಸಮಾಜದ, ಧರ್ಮದ ಸ್ಥಿತಿಯಲ್ಲಿ ರೂಪುಗೊಂಡಿರುತ್ತದೆ ಎಂಬುದನ್ನು ಮರೆಯುತ್ತಾರೆ. ಎಷ್ಟೋ ಸಂದರ್ಭದಲ್ಲಿ ಈ ಸ್ಥಿತಿ ಎನ್ನುವುದು ಸ್ತಬ್ಧತೆಯೂ ಆಗಿರುತ್ತದೆ; ಥರ್ಟಿ ಕಿಲೋಮೀಟರ್ ಪರ್ ಅವರ್ ಎಂದ ಹಾಗೆ.

ನಿಜದಲ್ಲಿ ಸ್ಥಿತಿಯನ್ನು ಪರಿಸ್ಥಿತಿ ವಿವರಿಸಿ ಕೊಡಬೇಕು. ಪರಿಸ್ಥಿತಿ ಎಂಬುದು ಏಕಕಾಲಿಕವಲ್ಲ, ಬಹುಕಾಲಿಕ, ಭೌಗೋಳಿಕತೆ ಕೂಡ ಅಲ್ಲಿ ಪ್ರಾಧಾನ್ಯತೆ ವಹಿಸುತ್ತದೆ. ಪರಿಸ್ಥಿತಿಯ ಮುಖ್ಯ ನೀತಿ ಸಮಕಾಲೀನ ಸಮಾಜದ ಆಯ್ಕೆಯನ್ನು ಆಧರಿಸುತ್ತದೆ. ಆದ್ದರಿಂದ ವ್ಯಕ್ತಿ ಅಥವ ಸಮಾಜದ ಮೌಲ್ಯ ನಿರ್ಧಾರಲ್ಲಿ ಪರಿಸ್ಥಿತಿ ಎಂಬುದೆ ಮುಖ್ಯ. ಜನಪದ ಅದನ್ನು ಒಪ್ಪಿದೆ. ಖಂಡಿತ ಈ ಹೆಣ್ಣು ಶ್ರೀಮಂತ ಮನೆಗೆ ಸೇರಿದವಳಲ್ಲ. ಭಾರಿ ಆಹಾರಕೊರತೆಯನ್ನು ಎದುರಿಸುತ್ತಿರುವವಳು. ಕಾಮ ಅವಳಿಗೆ ಒಂದು ಮೊತ್ತ ಅಥವ ಮೌಲ್ಯ ಎನಿಸಿಯೇ ಇಲ್ಲ. ಪುರುಷಾರ್ಥಗಳಲ್ಲಿ ಒಂದಾದ ಅದನ್ನು ಅವಳು ತನ್ನ ಸ್ತ್ರೀ ಅರ್ಥದಲ್ಲಿ ಸುಲಭವಾಗಿ ಧ್ವಂಸಗೊಳಿಸಿಬಿಟ್ಟಿದ್ದಾಳೆ.

ಒಂದು ಶಿಷ್ಟ ಸಮಾಜಕ್ಕೆ ಇದು ದೊಡ್ಡ ಶಾಕ್. ಜನಪದ ಸಮಾಜ ಅವಳ ದೇಹದ ಪ್ರದರ್ಶನವನ್ನು (performance) ತುಂಬ ಖುಷಿಯಿಂದ ಸ್ವೀಕರಿಸಿದೆ. ಅದು ಕಾರಣವಾಗಿಯೆ ಈ ಅಭಿವ್ಯಕ್ತಿಯನ್ನು ಸಮಾಜದ ಮಧ್ಯೆ ಬಿಟ್ಟಿದೆ. ಅವಳು ನಿಜದಲ್ಲಿ ಅಪರಾಧಿ ಆಗಿದ್ದಲ್ಲಿ ಅವಳ ಅಭಿವ್ಯಕ್ತಿಯನ್ನು ತುಂಡರಿಸುತ್ತಿತ್ತು. ಅವಳದು ಭಾವನೆಗಳನ್ನು ಚೆಲ್ಲಿಬಿಡುವ ವ್ಯಕ್ತಿತ್ವ. ಇದನ್ನು ಜನಪದರ ವ್ಯಕ್ತಿತ್ವದ ಭೌತಿಕ ಭೌತಿಕಪ್ರದರ್ಶನ ಎನ್ನಬಹುದು. ಸಿಟ್ಟು-ಸೆಡವು, ಕೋಪ-ತಾಪ, ಸಂತೋಷ, ಉನ್ಮಾದ ಆದಾಗಲೆಲ್ಲ ಜನಪದರು ಹೀಗೆ ವರ್ತಿಸುತ್ತಾರೆ. ಜನಪದರಲ್ಲಿ ಇರುವ ಬೈಗುಳ ಮತ್ತು ಜಗಳ ಪ್ರಕಾರಗಳು ಇದಕ್ಕೆ ಅತ್ಯುತ್ತಮ ಉದಾಹರಣೆ. ವ್ಯಕ್ತಿತ್ವವನ್ನು ಶಿಷ್ಟರಂತೆ ಕ್ರೂಡಿಕರಿಸದೆ ನೈಸರ್ಗಿಕ ಭಾವನೆಗಳಿಗೆ ಬಿಟ್ಟು ಕೊಟ್ಟು ಪರೀಕ್ಷಿಸಿಕೊಳ್ಳುವುದೇ ಜನಪದರಲ್ಲಿ ಕಂಡುಬರುವ ಒಂದು ಸಹಜ ಸ್ವಭಾವ.

## 6 ಸಾಂದರ್ಭಿಕ ಮತ್ತು ತಯಾರಿ

ಜನಪದ ಸಂಸ್ಕೃತಿ ಅರಳುವುದು ಸಂದರ್ಭಾನುಸಾರವಾಗಿ, ತರಬೇತಿಯನಂತರ ಅಲ್ಲ. ಒಬ್ಬ ವ್ಯಕ್ತಿ ಶಕ್ತಿವಂತನೊ, ಕಲಾವಿದನೋ, ಕಳ್ಳನೋ, ಜನಸೇವಕನೋ ಎಂದು ಗೊತ್ತಾಗುವುದು ಅವನಿಗೆಂದೆ ನಿರ್ದಿಷ್ಟವಾಗಿರುವ ಸಂದರ್ಭದಲ್ಲಿ. ಶಿಷ್ಟ ಸಮಾಜದಂತೆ ಜನಪದ ಸಮಾಜದಲ್ಲಿ ಕಲಾವಿದ, ಪೈಲ್ವಾನ್, ಸಮಾಜ ಸುಧಾರಕ ಎಂದು ಪ್ರತ್ಯೇಕ ಇರುವುದಿಲ್ಲ. ದಿನನಿತ್ಯದ ಅವನ ಕೆಲಸದ ಜೊತೆಯಲ್ಲೆ ಅವನ ವಿಶೇಷವೆಂಬ ನೈಪುಣ್ಯ ಇರುತ್ತದೆ. ಕಲಾವಿದನಂತೆಯೆ ಜನಪದ ವೈದ್ಯರನ್ನು ಗಮನಿಸಿ. ಅವರು ಪ್ರತ್ಯೇಕ ಕಾಣಿಸಿಕೊಳ್ಳುವಿಕೆಯಲ್ಲಿ ಸಿಗುವುದಿಲ್ಲ. ಜನಪದ ದೇವತೆಗಳ ಪೂಜಾರಿಗಳನ್ನು ಗಮನಿಸಿ. ಅವರು ಶಿಷ್ಟ ದೇವತೆಗಳ ಪೂಜಾರಿ ಅಥವ ಪುರೋಹಿತರ ಥರ ಕಾಣಿಸುವುದಿಲ್ಲ. ಇಂಥವರು ಸಮಾಜದ ಹೊರಗೆ ಇಲ್ಲ, ಹೊರೆಯೂ ಅಲ್ಲ. ಕೆಳಗಿನ ಎರಡು ಗಾದೆಗಳನ್ನು

ಗಮನಿಸಿ :

1) ಸಾವಿರ ವರ್ಷ ಸಾಮು ಮಾಡಿ ಸಾಯೋ ಮುದುಕಿ ಸೊಂಟ ಮುರಿದ

2) ಅಸಾಸುರ್ನ ಹೆಂಡ್ತಿ ಕಸ ಸುರಿಯೋನ್ ಜೊತೆ ಹೋದ್ಲು.

ಮುದುಕಿಯ ಸೊಂಟ ಮುರಿದದ್ದು ಆಕಸ್ಮಿಕ ಅಥವ ಅಚಾತುರ್ಯ ಎನ್ನುವಂತಿಲ್ಲ. ಮುದುಕಿಯ ಮೇಲೆ ತನ್ನ ಶಕ್ತಿ ತೋರಿದರೆ ಏನಾಗುತ್ತದೆ ಎಂಬ ವಿವೇಕವನ್ನೂ ತೋರದೆ ತನ್ನ ಶಕ್ತಿ ಪ್ರದರ್ಶನಕ್ಕೆ ಕೈಹಾಕಿದ್ದು ತನ್ನ ಶಕ್ತಿಯನ್ನು, ವೃತ್ತಿಯನ್ನು ಮುಖ್ಯ ಮಾಡಿಕೊಂಡದ್ದೇ ಆಗಿದೆ. ಕಸುಬು ಉದ್ಯೋಗ ಆದಾಗ ಹೀಗಾಗುತ್ತದೆ. ತಮ್ಮ ಉದ್ಯೋಗ ರಕ್ಷಣೆ ಮತ್ತು ಮೋಜಿಗಾಗಿ ಏನೂ ಮಾಡಲೂ ಸಿದ್ಧರಿರುವ ನಮ್ಮ ನೌಕರವರ್ಗವನ್ನು ಇಲ್ಲಿ ನೆನಸಿಕೊಳ್ಳಬಹುದು. ಎರಡನೆಯ ಗಾದೆಯನ್ನು ಗಮನಿಸಿ. ಹೆಂಡತಿಯನ್ನು ಕಟ್ಟಿಕೊಂಡಿರುವುದು ಕೂಡುವುದಕ್ಕೆ, ಕುಟುಂಬ ನಿರ್ಮಾಣಕ್ಕೆ ಮತ್ತು ಸಮಾಜದ ಬೆಳವಣಿಗೆಗೆ. ಕೂಡುವುದೇ ಜನಪದ ಸಂಸ್ಕೃತಿಯ ಪ್ರಧಾನ ಲಕ್ಷಣ. ಆದರೆ ಕೂಡಲು ಕಟ್ಟಿಕೊಂಡ ಹೆಂಡತಿಯನ್ನು ನಿರ್ಲಕ್ಷಿಸಿ ಹಗಲೂ ರಾತ್ರಿ ಬರೀ ಸಾಮು ಮಾಡುತ್ತ ಕುಳಿತರೆ ಏನಾಗುತ್ತದೆ! ಅವನು ಅಸಾಧಾರಣ 'ಅಸಾಸುರ' ಆಗಿದ್ದರೇನಂತೆ !!

# ಜನಪದ ಸಂಸ್ಕೃತಿ

ನೂರಾರು ವರ್ಷಗಳಿಂದ ಶಿಷ್ಟಸಂಸ್ಕೃತಿಯ ನಿರ್ವಚನ ನಡೆದಿದೆ. ದಿನ ಕಳೆದಂತೆ ಹೊಸ ಹೊಸ ವ್ಯಾಖ್ಯಾನಗಳು ಹುಟ್ಟಿಕೊಳ್ಳುತ್ತಿವೆ. ಯಾವುದನ್ನೂ ಪರಿಪೂರ್ಣ ಎನ್ನುವಂತಿಲ್ಲ. ಹಾಗೆಂದು ನಡೆದಿರುವ ಚಿಂತನೆಯನ್ನು ತಳ್ಳಿಹಾಕುವಂತಿಲ್ಲ. ಈಚೆಗೆ ಜನಪದ ಸಂಸ್ಕೃತಿ ಮಾತು ಹೆಚ್ಚಾಗಿ ಕೇಳಿಬರುತ್ತಿದೆ. ಎಲ್ಲಾ ಆಲೋಚನೆಗಳಲ್ಲಿ ಸಂಸ್ಕೃತಿ ವಿಶೇಷಣ ಸೇರಿಸುವುದು ರೂಢಿಯಾಗಿದೆ. ಶಿಷ್ಟಸಂಸ್ಕೃತಿಯ ನಿರೂಪಣೆಯಂತೆ ಜನಪದ ಸಂಸ್ಕೃತಿಯ ನಿರೂಪಣೆಯೂ ಕಷ್ಟ. ಮನುಕುಲದ ಮೌಖಿಕ ಬದುಕಿನ ಜೀವನ ವಿಧಾನದ ಮೂಲ ಆಶಯಗಳನ್ನು ಸ್ಪಷ್ಟವಾಗಿ ಗ್ರಹಿಸುವ ಮೂಲಕ ಅರ್ಥೈಸಬೇಕಾಗುತ್ತದೆ.

ಕನ್ನಡ ಜಾನಪದದ ಸುಪ್ರಸಿದ್ಧ ವಿದ್ವಾಂಸರಾದ ಡಾ. ಹಿ. ಶಿ. ರಾಮಚಂದ್ರೇಗೌಡರು ಜನಪದ ಸಂಸ್ಕೃತಿಯನ್ನು ಗಂಭೀರವಾಗಿ ಸಮೀಕ್ಷಿಸಿ ಸೋದಾಹರಣವಾಗಿ ವಿವರಿಸಿದ್ದಾರೆ. ಸಂಸ್ಕೃತಿ ಚಿಂತಕರಿಗೆ ಈ ಕಿರುಗ್ರಂಥ ಮೌಲಿಕ ಹೊಳಹುಗಳನ್ನು ನೀಡುತ್ತದೆ.

**ಪ್ರೊ. ಡಿ. ಲಿಂಗಯ್ಯ**

**ಕರ್ನಾಟಕ ಜಾನಪದ ಪರಿಷತ್ತು**
ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪
E-mail : janapadaparishath@hotmail.com